೩೫೫

ಜನಪದ ಹಾಗೂ ಸಮಾಜ ಕಾಯು

ಎಸ್. ಎಫ್. ಪೂಜಾರ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೧೯೮೪

ಉಪನ್ಯಾಸ ಗ್ರಂಥಮಾಲೆ

೩೫೫

ಜನಪದ ಹಾಗೂ ಸಮಾಜಕಾರ್ಯ

ಎಸ್. ಎಫ್. ಪೂಜಾರ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಕಾಶಕರು :

ಎಸ್. ಬಿ. ನಾಯಕ, ಎಂ.ಎ.
ಕಾರ್ಯನಿರ್ವಾಹಕ ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಅಗಸ್ಟ್, ೧೯೮೮

ಬೆಲೆ : ೫೦ ಪೈಸೆ

ಮುದ್ರಕರು :

ಎಚ್. ಗಂಗಯ್ಯ, ಎಂ.ಎಸ್‌ಸಿ.
ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವಿಟ್ಟು ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೫೪ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು – ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಜಿ. ದೇಸಾಯಿ
ಕುಲಪತಿ

ಅ ರಿ ಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದವರು ವಿಜಾಪುರ ಜಿಲ್ಲೆಯ ಬೆನಕಟ್ಟಿ ಗ್ರಾಮದಲ್ಲಿ ವೇಮನ ತತ್ವಪ್ರಸಾರ ಸಮಿತಿಯ ಆಶ್ರಯದಲ್ಲಿ ಏರ್ಪಡಿಸಿದ ಭಾಷಣವನ್ನು ಆಧರಿಸಿ ಈ ಪುಸ್ತಿಕೆಯನ್ನು ರೂಪಿಸಿದ್ದೇನೆ.

ಜನಪದ ಸಾಹಿತ್ಯ ಅಪಾರ ಹಾಗೂ ಅಮರವೆಂದೇ ಹೇಳಬೇಕು. ಜೀವನದ ಅನೇಕ ಕಷ್ಟ-ಕೋಟಲೆಗಳಿಗೆ ನಿವಾರಣೋಪಾಯಗಳ ಅನುಭವದ ಬುತ್ತಿಯನ್ನು, ನಿಧಿಯನ್ನು ಅಲ್ಲಿ ಕಾಣುತ್ತೇವೆ. ಅದನ್ನು ಸವಿಯುವ ನಾಲಿಗೆ, ಚಪ್ಪರಿಸಿ ಉಣ್ಣುವ ಸವಿಗಾರರೂ ಬೇಕು: ಜೀವನದ ಎಲ್ಲ ಹಂತಗಳಲ್ಲಿ ಹಾಸುಹೊಕ್ಕಾಗಿ ಬಂದಿದೆ ಜನಪದ ಸಮಾಜಕಾರ್ಯದಲ್ಲಿ ಬರುವ ಮಕ್ಕಳ ಕಾರ್ಯದಿಂದ ಪ್ರಾರಂಭಿಸಿ, ಮುದುಕರ ವರೆಗೂ, ಮನೆಯಿಂದ ಮಣ್ಣಿನ ವರೆಗೂ, ಮಣ್ಣಾದಮೇಲೂ ಬರುವ ಅನೇಕ ಸಮಸ್ಯೆಗಳಿಗೆ, ಅನೇಕ ಮಾತ್ರೆ-ಮದ್ದುಗಳು ಅಲ್ಲಿ ದೊರೆಯುತ್ತವೆ. ಮಾರು ಕಟ್ಟೆಗೆ ಹೋಗಿ ಕೊಳ್ಳುವ ತೊಂದರೆ ಏನೂ ಇಲ್ಲ. ಇದ್ದಲ್ಲಿಯೇ ಬೆಳಗಿನಿಂದ, ಮಲಗುವವರೆಗೂ ನಡೆಯುವ ಅನೇಕ ಕಾರ್ಯಚಟುವಟಿಕೆಗಳಲ್ಲಿ ತುಂಬಿಹರಿಯುತ್ತಿದೆ, ಈ ರಸಾಯನ.

ಜನಪದದಲ್ಲಿ ಸಮಾಜಕಾರ್ಯ, ಸಮಾಜ ವಿಜ್ಞಾನ, ಮನೋವಿಜ್ಞಾನ. ಸಮೂಹ ಚಿಕಿತ್ಸೆ, ವೈಯಕ್ತಿಕ ಸಾಂತ್ವನ, ಸಮಾಜಧೋರಣೆಗಳು ಹೇಗೆ ಒಡೆದು ಕಾಣುತ್ತವೆ ಎಂಬುದನ್ನು ಇಲ್ಲಿ ವಿವರಿಸಿದ್ದೇನೆ. ಓದುಗರು ಇದರ ಸದುಪಯೋಗ ಪಡೆದರೆ ನನ್ನ ಪ್ರಯತ್ನಕ್ಕೆ ತಕ್ಕ ಫಲ.

ಇಂಥ ಒಂದು ವೈಚಾರಿಕತೆಗೆ ಸ್ಫೂರ್ತಿಯನ್ನಿತ್ತ ಪ್ರಸಾರಾಂಗದ ಸಿಬ್ಬಂದಿಯನ್ನು, ಅದರಲ್ಲೂ ಆಗಿನ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ, ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಎಸ್.ಬಿ. ನಾಯಕ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಂ. ಗುಡ್ಡೀನ ಅವರಿಗೆ ಹಾಗೂ ವಿಶ್ವವಿದ್ಯಾಲಯಕ್ಕೆ ನಾನು ಋಣಿ. ಅಲ್ಲದೆ ಬೆನಕಟ್ಟಿ ಗ್ರಾಮಪಂಚಾಯತಿಯ ಅಧ್ಯಕ್ಷರಾದ ಶ್ರೀ ದಾನಪ್ಪ ನವರ ಹಾಗೂ ಸರ್ವಶ್ರೀ ಬಿ. ಬಿ ಹಂಡರಗಲ್, ಆರ್. ಬಿ. ದಾಸಪ್ಪನವರ, ಎಚ್. ಬಿ. ದಾಸಪ್ಪನವರ ಹಾಗೂ ಊರ ನಾಗರಿಕರೆಲ್ಲರಿಗೂ ನನ್ನ ಸ್ಮರಣೆಗಳು.

ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರಾದ ಶ್ರೀ ಎಚ್. ಕೆ. ಪಾಟೀಲರಿಗೂ, ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ಬಿ. ಡಿ. ಓ ಶ್ರೀ ಸುಭಾಸ್ ಹಾಗೂ ಸಹಭಾಷಣ ಕಾರರಾದ ಶ್ರೀ ಎಸ್. ಆರ್ ಪಾಟೀಲ ಅವರಿಗೂ ನನ್ನ ಹಾರ್ದಿಕ ವಂದನೆಗಳು.

ಈ ಪುಟ್ಟ ಕೃತಿಯನ್ನು ಅಚ್ಚುಮಾಡಿದ ಕ.ವಿ.ವಿ. ಮುದ್ರಣಾ ಲಯದ ನಿರ್ದೇಶಕರಾದ ಶ್ರೀ ಎಚ್. ಗಂಗಯ್ಯ ಅವರಿಗೂ, ಉಪನಿರ್ದೇಶಕರಾದ ಶ್ರೀ ಜಿ. ಬಿ. ಮನ್ವಾಚಾರ ಅವರಿಗೂ ಹಾಗೂ ಸಿಬ್ಬಂದಿ ವರ್ಗಕ್ಕೂ ನನ್ನ ನಮನಗಳು.

ಈ ಪುಸ್ತಿಕೆಯನ್ನು ಓದುಗರು ಮೆಚ್ಚುವರೆಂಬ ಭರವಸೆ ನನ್ನದು.

'ನಿಸರ್ಗ'
ಕಲ್ಯಾಣ ನಗರ
ಧಾರವಾಡ

ಎಸ್. ಎಫ್ ಪೂಜಾರ

ಪರಿವಿಡಿ

೧. ಪೀಠಿಕೆ

ಜನಪದ ಸಾಹಿತ್ಯವು ಜನರ ಸಾಹಿತ್ಯ, ಜನರಿಂದ ಸಾಹಿತ್ಯ, ಜನರಿಗಾಗಿ ಸಾಹಿತ್ಯ ಎನ್ನಬಹುದು. ಜಾನಪದರು, ಅಕ್ಷರ ಜ್ಞಾನ ವಿಲ್ಲದಿದ್ದರೂ ಸಮಾಜ ಶಿಕ್ಷಣ, ಜೀವನ ಶಿಕ್ಷಣ. ಅಷ್ಟೇ ಏಕೆ. ಆರ್ಥಿಕ, ರಾಜಕೀಯ ಹಾಗೂ ಮಾನಸಿಕ-ಸಮಸ್ಯೆಗಳಿಗೆ ಸರಳ ಸಾದಾ ರೀತಿಯ ಪರಿಹಾರೋಪಾಯಗಳನ್ನು ಕೊಟ್ಟಿದ್ದಾರೆ; ಪರಿಹಾರಗಳ ತಳಪಾಯವನ್ನೂ ಕಟ್ಟಿದ್ದಾರೆ, ಎನ್ನಲಭ್ಯಂತರ ವಿಲ್ಲ. ಜನಸಾಮಾನ್ಯರ ಸಮಾಜ ಜೀವನವನ್ನು ಅರ್ಥೈಸ ಬೇಕಾದರೆ ಈ ಸಾಹಿತ್ಯ ಒಂದು ಬೃಹತ್ ಖಜಾನೆ, ಸಂಪತ್ತಿನ ಸಾಗರ.

ಸಮಾಜಕಾರ್ಯದಲ್ಲಿ, ಸಮಾಜದ ಅಧ್ಯಯನವು ವೈಜ್ಞಾನಿಕ ವಾಗಿ ನಡೆಯುತ್ತದೆ. ಸಮಸ್ಯೆಗಳ ಪರಿಹಾರಕ್ಕೆ ತಂತ್ರಜ್ಞಾನ, ಕೌಶಲ್ಯ ಇತ್ಯಾದಿಗಳನ್ನು ಅಳವಡಿಸಿ, ಜನರು ತಮ್ಮ ತಮ್ಮಲ್ಲಿಯೇ ಬಗೆಹರಿಸಿಕೊಳ್ಳುವ ಅಥವಾ ನಿವಾರಣೋಪಾಯಗಳನ್ನು ಕಂಡುಕೊಳ್ಳುವ ಸಾಮರ್ಥ್ಯವನ್ನು ಈ ಮುಖಾಂತರ ಒದಗಿಸಲಾಗುತ್ತದೆ. "ತಾನು ಸಾಯದೆ ಸ್ವರ್ಗಸಿಗುವದಿಲ್ಲ" ವೆಂಬ ಉಕ್ತಿಯಂತೆ ಮಾನವನು ತನ್ನ ಸಾಮರ್ಥ್ಯ, ಸಂಪನ್ಮೂಲಗಳಿಂದ ತನ್ನ ಸಹಾಯ ತಾನೇ ಮಾಡಿಕೊಳ್ಳುವ ಸಹಾಯವನ್ನು ಮಾತ್ರ ಸಮಾಜಕಾರ್ಯವು ಮಾಡಬಲ್ಲದು. It helps him/her to help himself/herself. ತರಬೇತಿಹೊಂದಿದ ಸಮಾಜಕಾರ್ಯ ಪರಿಣತನು ಇರದ ಪ್ರಾಚೀನ ಸಮಾಜದಲ್ಲಿ ಜಾನಪದ ಸಾಹಿತ್ಯವು ಅವನ ಕೆಲಸವನ್ನು ಮಾಡಿದೆ. ಅದು ಜೀವನದ ಎಲ್ಲ ರಂಗಗಳಲ್ಲಿ ತಲೆದೋ

ರುವ ಸಮಸ್ಯೆಗಳ ಪರಿಚಯ, ಸಮಾಜ ರಚನೆ, ಸಂಸ್ಕೃತಿ, ಸೇವಾ ಭಾವಗಳ ಖಣಿ-ಖಜಾನೆಯಾಗಿ ನೆರವಾಗಬಲ್ಲದು. ಅದಕ್ಕೇ ಹಾಡಿದ್ದಾರೆ:

ಮುತ್ತು ಮಾಣಿಕ ಬೇಡ ಮತ್ತೆ ಸಂಪದ ಬೇಡ
ಸುತ್ತು ಕೋಟೆಯ ವೈಭವ ಬೇಡ । ನನ್ನವ್ವ
ಸುತ್ತೆಲ್ಲ ಜನಪದ ಹಾಡಿರಲಿ–ಎಂದು.

ಸಂಪತ್ತು–ವೈಭವ, ವಜ್ರ–ವೈಢೂರ್ಯಗಳು ಎಲ್ಲ ಬಗೆಯ ಇಕ್ಕಟ್ಟು ಬಿಕ್ಕಟ್ಟುಗಳನ್ನು ಬಗೆಹರಿಸಲಾರವು. ಕಾರಣ ಜನಪದ ಖಜಾನೆಯು ಜೀವನದ ಎಲ್ಲ ಸ್ತರಗಳಲ್ಲಿ ಹಾಸುಹೊಕ್ಕಾಗಿ ಬಂದು ಬದುಕಿಗೆ ದಾರಿತೋರಬಲ್ಲದು. ಅದಕ್ಕೆಂದೆ ನಮ್ಮ ಸುತ್ತೆಲ್ಲ ಜನಪದ ಬೇಕಾಗಿದೆ. ಇಲ್ಲಿ ಗೀತೆ, ಗಾದೆ, ಕಥೆ, ಒಗಟು, ಒಡಪು, ಆಟ, ಬಯಲಾಟಗಳು ಜನ–ಜೀವನದ ಕನ್ನಡಿಯಾಗಿ ನಿಲ್ಲುವವು. ಜೀವನದ ವಿವಿಧ ಸ್ತರಗಳನ್ನು ಇಲ್ಲಿ ಪರಿಶೀಲಿಸುವಾ.

೨. ಮಕ್ಕಳು ಸಮಾಜದ ಸಂಪತ್ತು

ನಮ್ಮ ಸಮಾಜದ ಸಂಪತ್ತು ಮಕ್ಕಳಲ್ಲವೆ? ಅಂಥ ಸಂಪತ್ತನ್ನು ಸ್ವಾಗತಿಸುವ ರೀತಿಯನ್ನು, ಮುಂದೆ ಅದು ಸಮಸ್ಯೆಗೀಡಾಗದಂತೆ ಮತ್ತು ಸಮಸ್ಯೆಯನ್ನು ಒಡ್ಡದಂತೆ ಮಗುವನ್ನು ಕುಟುಂಬದ ಕಣ್ಮಣಿಯನ್ನಾಗಿ ಬೆಳೆಸುವ ರೀತಿ ರಿವಾಜುಗಳನ್ನು ಜನಪದದಲ್ಲಿ ನೋಡಬಹುದು.

ಮಗುವು ತಾಯಿಯ ಗರ್ಭದಲ್ಲಿರುವಾಗಲೇ ಅದರ ಆರೈಕೆ ನಡೆದಿರುತ್ತದೆ ಎನ್ನಬಹುದು. ಕೀಟಲೆ ಕೊಡುವ ಅತ್ತೆ–ಮಾವಂದಿರೂ ಕೂಡ ಗರ್ಭಿಣಿಯಾದ ಸೊಸೆಯನ್ನು ಗೌರವಿಸಿ 'ಹೂ'

ಮುಡಿಸುವ ಕಾರ್ಯಮಾಡುತ್ತಾರೆ. ಅವರಿಗೆ ಸೊಸೆಯಿಂದ ಮನೆಯ ದೀಪ ಬೆಳಗುತ್ತದೆಂಬ ಭರವಸೆ, ಉತ್ಸಾಹ. ಇಲ್ಲಿ ನೆರೆ ಹೊರೆಯುವರೂ 'ಹೂ' ಮುಡಿಸುವ ಕಾರ್ಯದಲ್ಲಿ ಭಾಗವಹಿಸಿ ಒಂದೊಳ್ಳೆ ವಾತಾವರಣವನ್ನೂ, ಮಾನಸಿಕ ನೆಮ್ಮದಿಯನ್ನೂ ನೀಡುತ್ತಾರೆ. ಹೆರಿಗೆ ಚೆನ್ನಾಗಿ ಆಗಲಿ, ಮಗುವು ಚೆನ್ನಾಗಿ ಬೆಳೆಯಲಿ ಎಂದು ಬಯಕೆಯ ಊಟ-ಉಡುಗೊರೆಗಳನ್ನು ಕೊಡುತ್ತಾರೆ. ಗೀತೆಗಳು ಇಂತಿವೆ. :

ನಾಕು ತಿಂಗಳ ಬಸರ ನಾ ಕೇಳಿ ನೀ ಕೇಳಿ
ನೀರ ಹೊಳಿ ಕೇಳಿ ನಿಜವಾಗಿ । ಮನಿಯಾನ
ಮಾವ ಕೇಳಿ ಹೂವ ಮುಡಿಸ್ಯಾರ ॥

ಗರ್ಭವತಿಯು ಒಂದು ತಿಂಗಳಿಂದ ಪ್ರಾರಂಭಿಸಿ ಎಂಟು ತಿಂಗಳುಗಳ ವರೆಗೆ ಏನನ್ನು ಬಯಸಬಲ್ಲಳು ಎಂಬುದನ್ನು ಕುಬಸಾ ಮಾಡುವ ಹಾಡಿನಲ್ಲಿ ಕಾಣಬಹುದು. ಈ ಹಾಡು ಕೇಳಿದರೆ ಬಯಕೆಯ ತಿನಿಸು ಊಟಗಳು ಹೇಗಿರುತ್ತವೆ ಎಂಬುದರ ಅರಿವಾಗುತ್ತದೆ. ಉದಾ:

ಒಂದಂಬು ತಿಂಗಳಿಗೆ ಒಂದೇನ ಬಯಸ್ಯಾಳ
ಅಂಗೈಯಲುಪ್ಪಾ ಎಳೆಹುಣಸಿ
ಎರಡಂಬು ತಿಂಗಳಿಗೆ ಎರಡೇನ ಬಯಸ್ಯಾಳ
ಎರಡೆಲಿಗೊಂಡ ಎಳಿ ಮಾವ।

ಮೂರಂಬು ತಿಂಗಳಿಗೆ ಮೂರೇನ ಬಯಸ್ಯಾಳ
ಮೂಡ್ಯಲ ದಿಕ್ಕಿನ ಮಗಿಮಾವ
ನಾಕಂಬು ತಿಂಗಳಿಗೆ ನಾಕೇನ ಬಯಸ್ಯಾಳ
ಕಾಕೀಯ ಹಣ್ಣು ಕೈ ತುಂಬಾ ॥

ಐದುಂಬು ತಿಂಗಳಿಗೆ ಐದೇನ ಬಯುಸ್ಯಾಳ
ಕೊರ‍್ವ್ದು ಮುಸ್ಲೀಗಿ ನಸಿದುಂಡಿ
ಆರೆಂಬು ತಿಂಗಳಿಗೆ ಆರೇನ ಬಯುಸ್ಯಾಳ
ಆರಾಕಿದ ಬಾನ-ಕೆನಿ-ಮಸರ

ಏಳೆಂಬು ತಿಂಗಳಿಗೆ ಏಳೇನ ಬಯುಸ್ಯಾಳ
ಹೇಳಿಕಳುವ್ಯಾಳ ತವರಿಗಿ
ಎಂಟೆಂಬು ತಿಂಗಳಿಗೆ ಎಂಟೇನ ಬಯುಸ್ಯಾಳ
ಕಂಟಲ್ಯಾಲಕ್ಕಿ ಕೊಡತುಪ್ಪ

ಒಂಬತ್ತು ತಿಂಗಳಿಗಿ ತುಂಬ್ಯಾವ ನವಮಾಸ
ಸಂದು ಸಂದೆಲ್ಲ ಕಿರಿಬ್ಯಾನಿ
ವ್ಯಾಳ್ಯ ವ್ಯಾಳ್ಯಕ್ಕೆ ಬ್ಯಾನಿ ತಾಳ ಬಾರಿಸಿದಾಂಗ
ತಾಳಲಾರೆನೆ ಸಿಲ್ಲಲಾರೆನಪ್ವ ತಾಯವ್ವನಿರಬೇಕ ಜನ್ಮಕ

ಹೊತ್ತು ಹೊತ್ತಿಗೆ ಬ್ಯಾನಿ ಕತ್ತೀಲೆ ಕಡ್ದಂಗ
ಹೆತ್ತವ್ವನಿರಬೇಕು ಜನ್ಮಕ
ಪತ್ತೆಂಬು ತಿಂಗಳಿಗಿ ಹೆತ್ತಾಳ ಹಸಗೂಸ
ಸುತ್ತೆಲ್ಲ ನೆರದಾರ ಸುಮಂಗಲೇರು.

ಹೀಗೆ ಹಾಡಿ ಇದರ ಅರಿವು ಎಲ್ಲರಿಗೂ ಬರುವಂತೆ ಮಾಡುವ ದಲ್ಲದೆ. ಬಯಕೆಗಳನ್ನು ಪೂರೈಸುವಲ್ಲಿ ಎಲ್ಲರೂ ಸಹಕರಿಸುತ್ತಾರೆ. ನೆರೆಹೊರೆಯವರು, ಊರವರು, ಪರ ಊರವರು ಇದು ಒಂದು ಪುಣ್ಯದ ಕೆಲಸ. ಸೇವೆ ಎಂದು ಭಾವಿಸಿ ಬಯಕೆಯ ಊಟ-ಉಡುಗೆಗಳನ್ನು ಕೊಡುತ್ತಾರೆ. ಇಲ್ಲಿ ಹೋಳಿಗೆ ದೋಣಿಹಾಕುವ ಅಂಬಿಗನೂ ಕೂಡ ತನ್ನದೇ ಆದ ರೀತಿಯಲ್ಲಿ ಸೇವೆ ಮಾಡುತ್ತಾನೆ. ಸಾಮಾನ್ಯವಾಗಿ ಯಾವುದೇ ಅಂಬಿಗನು ಒಬ್ಬೊಬ್ಬರಿಗೆ ದೋಣಿ

ಯನ್ನು ಬಿಟ್ಟು ಹೊಳೆದಾಟಿಸುವದಿಲ್ಲ. ಆದರೆ ಇಲ್ಲಿ ಗರ್ಭವತಿಯ-ತಾಯಿಯು ತವರಿನಿಂದ ತನ್ನ ಮಗಳಿಗಾಗಿ ಬಯಕೆಯ ಊಟ ಒಯ್ಯುತ್ತೇನೆ ಎಂದಾಗ ಅಂಬಿಗನು ಯಾವ ಯೋಚನೆಯನೂ ಮಾಡದೆ ಒಬ್ಬರಿಗಾಗಿಯೇ ದೋಣಿಯನ್ನು ಬಿಟ್ಟು ದಾಟಿಸುತ್ತಾನೆ. ಇದನ್ನು ಈ ಗೀತೆಯಲ್ಲಿ ಕಾಣಬಹುದು.

ತಂಬಿಟ್ಟ ತಿಳಿದುಪ್ಪ ನಿಂಬಿ ಉಪ್ಪಿನಕಾಯಿ
ಅಂಬಿಗಾರಣ್ಣ ಹೊಳಿ ಹಾಸೊ। ನನ ಮನಿಯು
ರಂಬಿ ನನ ಮಗಳ ಬಂಕ್ಯೂಟ ॥

ಹೀಗೆಯೇ ಕೆಲ ತಾಯಂದಿರು ಬೇರೆ ಬೇರೆ ಬಯಕೆಗಳುಳ್ಳವರಾಗಿರುತ್ತಾರೆ. ಎಳ್ಳ ಹಚ್ಚಿದ ರೊಟ್ಟಿ, ಬದನೆಕಾಯಿ ಎಣೆಗಾಯಿ ಇತ್ಯಾದಿ ಇವೆಲ್ಲವುಗಳ ಪಟ್ಟಿಯೇ ಹಾಡುಗಳಲ್ಲಿ ದೊರೆಯುತ್ತದೆ. ಇದೊಂದು ಎಲ್ಲರಿಗೂ ಮಾರ್ಗದರ್ಶನವಾಗಬಲ್ಲದು. ಬೇನೆ ಬಯಕೆ ನೋವು ನಲಿವುಗಳನ್ನು ತಾಯಿಯ ಮುಂದೂ ಹೇಳುತ್ತಾರೆ. ಇದರಿಂದ ಸಮಾಧಾನ, ಸಾಂತ್ವನ, ಸಮೂಹ ಚಿಕಿತ್ಸೆ ದೊರೆಯುತ್ತದೆ. ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎನ್ನಬಹುದು. ಇದರಿಂದ ಚೊಚ್ಚಲು ಗರ್ಭವತಿಗೂ ಯಾವದೇ ಅಂಜಿಕೆ ಬರುವುದಿಲ್ಲ. ಸರಳವಾಗಿ ಹೆರಿಗೆಯಾಗುತ್ತದೆ. ಇಷ್ಟಾದ ಮೇಲೆ ಚೆನ್ನಾಗಿ ಹೆರಿಗೆಯಾಗಲು ತಾಯಿಯು ತನಗಾದ ನೋವನ್ನೇ ಮರೆಯುತ್ತಾಳೆ, ಮಗುವಿನ ಮುಖಕಮಲವನ್ನು ನೋಡಿ. ಕೇಳಿ:

ಬಾಲನ ಹೆರುವಾಗ ಬಾಡಿತಮ್ಮನ ಮೊಗ
ಬಾಲ ಚೆಂಡಾಡಿ ಬರುವಾಗ। ಅಮ್ಮನ ಮೊಗ
ಕುಂದಣದ ಚಿನ್ನ ಹೊಳೆದಂಗ ॥

ಮುಂದೆ ಹೆಸರಿಡುವ ಕಾರ್ಯ ಮಾಡುತ್ತಾರೆ. ಇಲ್ಲಿ ಎಲ್ಲರೂ ಸೇರಿದು ಒಂದು ಉತ್ಸವದ ಸುಂದರವಾದ ವಾತಾವರಣ ವನ್ನು ನೀಡಿ ಮಗುವು ಸುಖವಾಗಿ ಬಾಳಲೆಂದು ಹರಸುತ್ತಾರೆ.

ಒಂದಾಗಿ ಕೂಡಿಕೊಂಡು ಚೆಂದದ ಹೆಸರ ಇಡುವರೆ
ನಾರಿಯರು ಕಂದಯ್ನ ತಂದ ಒರ್ಗಾರೆ। ಏನಂಬರೆ
ಚೆಂದದಲಿ ನೀನು ಸುಕು ಬಾಳೊ ಕಂದಯ್ಯ
ಮಂಡಲದಲಿ ನಮ್ಮ ಹೊಗಲಾಡೊ॥

೩. ಮಕ್ಕಳನ್ನು ಸಾಕಿ ಜೋಕೆಮಾಡುವದು

ಮಕ್ಕಳು ಹೆಚ್ಚಾಗಬೇಕೆನ್ನುತ್ತಿದ್ದ ಕಾಲವೂ ಇತ್ತು. ಒಂದು ಮಗು ಹೆಚ್ಚಾದರೆ ಎರಡು ಕೈಗಳು ಕೆಲಸಮಾಡುತ್ತವೆ ಎನ್ನುವ ರೂಢಿಯೂ ಇತ್ತು. ನಮ್ಮ ದೇಶದ ಹಳ್ಳಿಗಳಲ್ಲಿ ಒಕ್ಕಲುತನಕ್ಕೆ ಹೆಚ್ಚಿನ ಜನ ಬೇಕಾಗಿದ್ದರು. ಅಲ್ಲದೆ ಆರೋಗ್ಯ ಸೇವೆ ಮತ್ತು ಅಗ್ಯೆಕೆಗಳಿಲ್ಲದೆ ಬಹಳಷ್ಟು ಮಕ್ಕಳು ಮರಣಕ್ಕೀಡಾಗುತ್ತಿದ್ದುದೂ ಉಂಟು. ಕಡಿಮೆ ಮಕ್ಕಳಿರಬೇಕೆನ್ನುವ ಮಾತನ್ನು ಜನಪದದಲ್ಲೂ ಕಾಣಬಹುದು. ಒಂದು ಗಾದೆ ಮಾತು 'ಇದ್ದ ಮಕ್ಕಳಿಗೆ ಕೂಳಿಲ್ಲ ಮತ್ತೊಂದು ಕೊಡು ಶಿವನೆ ಅಂದ್ರಂತ'. ಅಂದರೆ ಆಹಾರ ಅಗ್ಯೆಕೆ ಇಲ್ಲದೆ ಮಕ್ಕಳು ಸರಿಯಾಗಿ ಬೆಳೆಯಲಾರವು ಎನ್ನುವ ಅರಿವು ಇಲ್ಲಿ ದೊರೆಯುತ್ತಿದೆ. ಇದ್ದ ಮಕ್ಕಳನ್ನು ಚೆನ್ನಾಗಿ ಜೋಕೆ ಮಾಡಬೇಕು, ಬೆಳಸಬೇಕು ಸಮಾಜದಲ್ಲಿ ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಸತ್ಪ್ರಜೆಗಳನ್ನಾಗಿ ಮಾಡಬೇಕೆನ್ನುತ್ತಾರೆ. ಜಾನಪದರೂ ಕೂಡ. ಮಕ್ಕಳನ್ನು ಜೋಗುಳ ಹಾಡಿ ಮಲಗಿಸು ತ್ತಾರೆ. ನಿದ್ದಿಗುಳಿಗೆಗಳನ್ನು ಕೊಡುವದಿಲ್ಲ. ಜೋಗುಳದ ಹಾಡು

ಗಳಲ್ಲಿ ನೀತಿಬೋಧೆ ಹಾಗೂ ಉಳಿದ ಉಪಯುಕ್ತ ಸಲಹೆಗಳು ಮೂಡಿ ಬಂದಿರುತ್ತವೆ. ಮಕ್ಕಳ ಬಾಯಿಗೆ ಬಾಟ್ಲಿ ನಿಪ್ಪಲ್ ಇಡದೆ ಎದೆಯುಣಿಸುತ್ತಾರೆ ತುಟಿಗೆ ಬಣ್ಣ ಹಚ್ಚದೆ ಪ್ರೀತಿಯಿಂದ ಮುದ್ದಿಸುತ್ತಾರೆ. ಹೀಗೆ ಜೋಗುಳ ಕೇಳಿ ಮಲಗಿದ ಎದೆಯುಂಡು ಆಡಿದ ಪ್ರೀತಿ ವಾತ್ಸಲ್ಯಗಳನ್ನು ಪಡೆದು ಬೆಳೆದ ಮಕ್ಕಳು ಸದೃಢರೂ ಸಜ್ಜನರೂ ಆಗಿ ಬದುಕು ನಡೆಸಬಲ್ಲರು. ಇವು ಇಲ್ಲದೆ ಬೆಳೆದ ಮಕ್ಕಳು ಸಮಸ್ಯಾ ಮಕ್ಕಳಾಗುವರೆಂಬುದರಲ್ಲಿ ಸಂಶಯವಿಲ್ಲ. ಆದಕ್ಕೆಂದು ಜನಪದರು ಈ ವಿಷಯಗಳ ಜ್ಞಾನವನ್ನು ತಮ್ಮ ಹಾಡುಗಳ ಮುಖಾಂತರ ಮಾಡಿಕೊಡುತ್ತಾರೆ. ಹಾಡು ಕೇಳಿ :

ಜೋಗುಳ ಹಾಡಿದರ ಆಲೀಸಿ ಕೇಳ್ಯಾನು
ತಾಯೀಯ ಹಂಬಲ ಮರೆತಾನು। ಕಂದಯ್ಯ
ಜೋಗೂಳದಾಗ ಅತಿ ಮುದ್ದು॥

ಅತಿಯಾದ ತಾಯಿಯ ಹಂಬಲವೂ ಸರಿಯಲ್ಲ. ಜೋಗುಳದಿಂದ ಮಕ್ಕಳು ತಾಯಿಯ ಹಂಬಲವನ್ನು ಮರೆಯುತ್ತಾರೆ. ಇದನ್ನು ಮನೋವಿಜ್ಞಾನವೂ ಒಪ್ಪುತ್ತದೆ.

ನನ್ನ ಅಣ್ಣನ ಮಗಳ ನನಗ ಹೋಲಲಿಬ್ಯಾಡ
ನನ್ನಲ್ಲಿ ಭಾರಿ ಗುಣವಿಲ್ಲ । ಹೇಮರಡ್ಡಿ
ಮಲ್ಲಮ್ಮಗೋಲ್ಬಲ ನನ ಸೊಸಿಯೆ॥

ಇಲ್ಲಿ ಹಾಡಿ ತೂಗುವವರಿಗೂ ಕೇಳುವವರಿಗೂ ಕೂಡ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳುವ ಪಾಠ ಪರಿಣಾಮಕಾರಿ. ಇದಲ್ಲದೆ ಹಾಸ್ಯದ ಹೊನಲೂ ಇದೆ ಕೇಳಿ :

ರಚ್ಚೆಗಾರ ಸನಕಂದ ಉಚ್ಚೀಯ ಹೋದಾರೆ
ಬಚ್ಚಲು ತುಂಬಿ ಕೊಣೆ ತುಂಬಿ| ಮಾವಯ್ನ
ಬತ್ತದ ರಾಶಿ ಮಳಿಗರದೊ

ಸಂಗೀತದಿಂದ ಮಗು ಮಲಗುವದಲ್ಲದೆ, ಬೆಳೆಯೂ ಬೆಳೆಯುತ್ತದೆ. ಅಷ್ಟೇ ಏಕೆ ಮಾನಸಿಕ ರೋಗವೂ ಮಾಯವಾಗುತ್ತದೆ. ಇದನ್ನು ಆಧುನಿಕರು ತಮ್ಮೆಲ್ಲ ಪರಿಕರಗಳ ಸಹಾಯದಿಂದ ಶ್ರಮವಹಿಸಿ ಸಂಶೋಧನೆಮಾಡಿ ಕಂಡುಹಿಡಿದಿದ್ದಾರೆ. ಆದರೆ ಜಾನಪದರು ಈ ಮೊದಲೇ ಕಂಡುಕೊಂಡಿದ್ದಾರೆ. ಅವರ ಹಾಡನ್ನು ನೋಡಿ :

ತಾಯಿಯ ಹಾಡೀಗೆ ಕೂಸು ತಾನಾಡೀತು
ಒಣಗಿದ ಮಲ್ಲಿಗೆ ಚಿಗಿತೀತು। ನಕ್ಕೀತು
ಮಾಸೀದ ಮನಸು ಮಡಿಯಾಯ್ತು॥

ಮಗುವಿಗೆ ತಾಯಿಯ ಎದೆಹಾಲು ಎಲ್ಲ ಆಹಾರಕ್ಕಿಂತಲೂ ಶ್ರೇಷ್ಠವೆಂದು ವೈದ್ಯರು ಈಗೀಗ ಹೇಳುತ್ತಿದ್ದಾರೆ. ಅದರಿಂದ ಮಗುವು ರೋಗನಿರೋಧಕ ಶಕ್ತಿಯನ್ನು ಬೆಳೆಯಿಸಿಕೊಳ್ಳುತ್ತದೆ. ಇದು ಕಲಬೆರಕೆ ಆಹಾರವಂತೂ ಅಲ್ಲವೇ ಅಲ್ಲ. ಶುದ್ಧ-ಸಿದ್ಧೌಷಧ ಇದ್ದಂತೆ.

ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ
ಚೆನ್ನಾಗಿ ಕಳಿತ ರಸಬಾಳೇಹಣ್ಗಿಂತ
ಚೆನ್ನ ಕಾಣೆ ತಾಯಿ ಎದೆಹಾಲು ॥

ಈ ಪದ್ಯಗಳು ತಾಯಂದಿರಿಗೂ, ಇನ್ನಿತರರಿಗೂ ಪ್ರಕ್ಕಟೆಯಾಗಿ ವೈದ್ಯಕೀಯ ಸಲಹೆ-ಸೇವೆಗಳನ್ನು ನೀಡುತ್ತವೆ. ಈ ಕಾರಣಕ್ಕೂ ಈ ಹಾಡುಗಳನ್ನು ಹಾಡಿಸಬೇಕು, ಹಾಡಬೇಕು. ಈ ಕಲೆಯನ್ನು ಕಾಪಾಡಿಕೊಂಡು ಬರಬೇಕು. ಇಲ್ಲವಾದರೆ ಈ

ವಿಷಯದ ಅರಿವು ಅನೇಕ ಜನರಿಗೆ ಆಗುವದು ಕಷ್ಟಸಾಧ್ಯವಾದೀತು.

ಮಗುವನ್ನು ಪ್ರೀತಿಸಿ, ಮುದ್ದಿಸಿ ಬೆಳೆಸುವಂತೆ, ತಪ್ಪಾದುದನ್ನು ಮಾಡಿದಾಗ ಶಿಕ್ಷಿಸಲೂ ಬೇಕು ಎನ್ನುತ್ತಾರೆ. ಇದು ಮನಶ್ಶಾಸ್ತ್ರಕ್ಕೂ ಒಪ್ಪಿತ. ಇಲ್ಲೊಂದು ಗಾದೆಮಾತು ಹೀಗಿದೆ. "ಮಕ್ಕಳ ಹೊಡೆದು ಸಾಕು. ನುಗ್ಗೆ ಮುರಿದು ಹಾಕು" ಎಂದು. ಆದರಂತೆ ಅತಿಯಾದ ಶಿಕ್ಷೆ ಅತಿಯಾದ ಪ್ರೀತಿಯೂ ಸರಿಯಲ್ಲ. ಕಾರಣ ಎಂಥ ಬಡತನವಿದ್ದರೂ ಮಗುವಿಗೆ ಹೊಡೆದು ಬಡಿದು ಶಿಕ್ಷಿಸಬಾರದು, ಪ್ರೀತಿ ಮಗುವಿಗೆ ದೊರೆಯಲೇ ಬೇಕೆಂಬುದನ್ನು ಒಳ್ಳೆಯ ಮಾರ್ಮಿಕವಾಗಿ ಹಾಡಿದ್ದಾರೆ ಆಲಿಸಿ.

ಬಡತನ ಬಂದರ ಬಡಿಬ್ಯಾಡ್ರಿ ಮಕ್ಕಳನ
ಆಡಾಡಿ ಬಂದು ತೊಡಿಮ್ಯಾಲ | ಕೂತರ
ಬಂದ ಬಡತನ ಬಯಲಾಗಿ ||

ಮಗುವಿನ ಆಟಪಾಟಗಳಿಂದ ಕುಟುಂಬದ ಸದಸ್ಯರಿಗೂ, ಅದರಲ್ಲಿ ತಂದೆ-ತಾಯಿಗಳಿಗೂ ಮನರಂಜನೆ ದೊರೆಯುತ್ತದೆ; ಬೇಸರಿಕೆ ದೂರವಾಗುತ್ತದೆ.

ಆಸರಕಿ ಬ್ಯಾಸರಿಕಿ ಯಾರಿಂದ ಕಳಿಯಲಿ
ಕೂಸ-ಕಂದಯ್ಯ ತೊಡಿಮ್ಯಾಲ | ಆಡಿದರ
ಬಂದ ಬ್ಯಾಸರಿಕಿ ಬಯಲಾಗಿ ||

ಜಾನಪದರಿಗೆ ಮಕ್ಕಳ ಮೇಲೆ ತಾರತಮ್ಯವಿಲ್ಲ-ಗಂಡು ಮಗುವಾದರೆ ಹಿಗ್ಗುವದಿಲ್ಲ. ಹೆಣ್ಣು ಆದರೆ ಕುಗ್ಗುವದಿಲ್ಲ. ಈಗಿನವರು ಮಾತ್ರ ಹೆಣ್ಣು ಆದರೆ ಹುಣ್ಣು ಎನ್ನುತ್ತಾರೆ. ಸಮಾಜ ವ್ಯವಸ್ಥೆ ತಪ್ಪುದಾರಿ ತುಳಿಯುತ್ತಿದೆ. ಆ ದಾರಿ ಸರಿ ಮಾಡಲು ಈ ಹಾಡುಗಳನ್ನು ಆಲಿಸಿ, ಆಸ್ವಾದಿಸಿರಿ !

ಹೆಣ್ಣು ಮಕ್ಕಳು ನಮಗೆ ಪುಣ್ಯದ ಫಲತಾಯಿ
ಅಕ್ಕನ ಮಗನು ನನ ಮನಿಗೆ । ಬರುವಂತ
ಹೆಣ್ಣು ಮಕ್ಕಳನು ಕೊಡು ಶಿವನೆ ॥

ಸೊಸಿಯು ಬರ್‍ತಾಳಂತ ಖುಷಿಬಾಳ ಮನದಾಗ
ಸೊಸಿ ಬಂದು ಮಗನ ಕಸಗೊಂಡು । ಬಾಳ್ವಾಗ
ಕಿಸಬಾಯಿ ಮುಗಿಲೀಗೆ ತೆರದಾಳ ॥

ಹಾಗೆಯೇ : ಹೆಣ್ಣು ಹೆತ್ತೇನಂತ ಹೆಚ್ಚಳ ನಿನಗ್ಯಾಗ
ಹೆಣ್ಣು ನೆರೆಮನಿಯ ಸಿರಿದೇವಿ । ತಾಯಮ್ಮ
ಗಂಡು ನಮ್ಮನಿಗೆ ತೊಲಿಕಂಬೋ ॥

ಮಗುವು ಸಮಾಜದಲ್ಲಿ ಹೊಂದಿಕೊಳ್ಳಲು, ಅದರ ಸಾಮಾಜೀಕರಣ (Socialisation) ಸಮೂಹ ಚಿಕಿತ್ಸೆಗಳನ್ನು ಮನಮುಟ್ಟುವಂತೆ ಹೇಳಿದ್ದಾರೆ.

ಮಂದಿ ಮಕ್ಕಳೊಳಗೆ ಚಂದಗೊಂದಿರಬೇಕ
ನಂದೀಯ ಶಿವನ ದಯದಿಂದ । ಹೋಗಾಗ
ಮಂದಿ ಬಾಯಾಗ ಇರಬೇಕ ॥

ಎಲ್ಲ ಮಕ್ಕಳಿರ ಬನ್ನಿರಿ ನಮ್ಮನಿಗೆ
ಬೆಲ್ಲ ಮೂರುಂಡೆ ಚಿಗುಳಿಯ । ತಕ್ಕೊಂಡು
ಬನ್ನಿರಿ ಕಂದಯ್ನ ನೆರವೀಗೆ ॥

ಮಕ್ಕಳಿಲ್ಲದವರಿಗೆ "ಬಂಜೆ" ಎಂದು ಹೀಗಳೆದರೆ. ಅವರಿಗಾಗುವ ದುಃಖ-ದುಮ್ಮಾನಗಳನ್ನು ನಿವಾರಿಸಲೂ ಹೀಗೆ ಹೇಳಿದ್ದಾರೆ.

ಮಕ್ಕಳಿಲ್ಲೆಂದು ದುಃಖವ ಮಾಡದಿರು
ಅಕ್ಕನ ಮಗನೆ ಅವನ್ಯಾರು । ಚಂದ್ರಾಮ
ದುಃಖದಲಿ ನಿನಗೆ ಒದಗುವ ॥

ಇಲ್ಲವೇ ದತ್ತಕ ಮಗುವಿನಿಂದಲೂ ದುಃಖಿಸಿವಾರಗೆ ಸಾಧ್ಯ. "ಹಡೆದ ತಾಯಿಗಿಂತ ಪಡೆದ ತಾಯಿ ಮೇಲೆಂದು" ಒಂದು ಗಾದೆ ಮಾತೂ ಇದೆ.

೪. ಮಕ್ಕಳ ಆಟ–ಪಾಟ

ಮಕ್ಕಳಿಗೆ ಜಾನಪದ ಆಟ–ಪಾಟಗಳಲ್ಲಿ, ವ್ಯಾಯಾಮ, ಮನರಂಜನೆ ಸಮಾಜ ಪಾಠಗಳೂ ದೊರೆಯುತ್ತವೆ

ಒಂದs ಸುತ್ತಿನ ಕ್ವಾಟಿ
ಅದರಗ ಒಂದs ಚೆಂದಳ ಬಸವ
ಬಸವಕ್ಕ ಬಸವನ್ನಿರೆ
ಬಸವನ ಪಾದಕ ಶರಣ್ನ್ರೆ

ಹೀಗೆ ಹತ್ತಸುತ್ತಿನಕ್ವಾಟಿಯುವರೆಗೆ ಹೋಗುತ್ತದೆ. ಇಲ್ಲಿ ಮನರಂಜನೆ, ದೇವರಿಗೆ ಬಾಗುವದು, ಶರಣೆನ್ನುವದೂ ಅಲ್ಲದೆ ಒಂದರಿಂದ ಹತ್ತರವರೆಗೆ ಅಂಕಿಯ ಪಾಠವೂ ಬರುತ್ತದೆ.ಮುಂದೆ:

ಅಕ್ಕಿತೊಳಿಸೆನಾ ಅಕ್ಕಿತೊಳಿಸೆನಾ
ಬಣ್ಣದ ಒಣಕೀಲೆ
...   .
ಅನ್ನಾ ಮಾಡೆನಾ ಅನ್ನಾ ಮಾಡೆನಾ
ತಾಮ್ರದ ತಪೆಲೀಲಿ

ಇದು ಹೆಣ್ಣು ಮಕ್ಕಳಿಗೆ ಮನೆಗೆಲಸದ ಅರಿವು ಮಾಡಿಕೊಡುತ್ತದೆ. ಇದರಂತೆ ಒಗಟುಗಳ ಮುಖಾಂತರ ತಮ್ಮ ಸುತ್ತಲಿನ ಪರಿಸರದ ಬಗೆಗೆ, ಕಲ್ಪನೆ, ತರ್ಕಗಳನ್ನು ಮಾಡಲಿಕ್ಕೆ ಹಚ್ಚುತ್ತದೆ.

ಉದಾ :

ಅಂಕಣಾಂಕಣದೊಳಗೆ ಕಳ್ಳೊಬ್ಬ ಹೊಕ್ಕ
ಅದಕಂಡು ಬೇಗದಲಿ ಮತ್ತೊಬ್ಬ ಹೊಕ್ಕ
ಅಲ್ಲಿಂದ ಕಡದಾಟಿ ರಕ್ತವನೆ ಕಕ್ಕ ॥
ಇದ ಹೇಳಿದಣ್ಣಗಳಿಗೆ ಒಡಿತುಂಬ ರೊಕ್ಕ

ನೀನು ಹೇಳಿದ ಒಗಟು ಅಡಿಕೆ, ಎಲೆ, ಸುಣ್ಣ
ನಾನೊಂದ ಒಗಟಿ ಕೇಳುವೆನು ಹೇಳಣ್ಣ ॥

ಹೀಗೆ ಒಳ್ಳೆಯ, ಆಟ, ವ್ಯಾಯಾಮ. ಮನರಂಜನೆ. ಪರಿಸರ. ಸೃಷ್ಟಿಯ ಜ್ಞಾನಗಳಿಂದ ಮಕ್ಕಳು ಒಳ್ಳೆಯ ನಾಗರಿಕರಾಗಿ ಸಮಾಜದಲ್ಲಿ ಹೊಂದಿಕೊಂಡು ಬಾಳುವಂತಾಗುತ್ತಾರೆ.

೫. ಶಿಕ್ಷಣ ವಿಚಾರ

ಜಾನಪದರು ತಾವು ಓದದಿದ್ದರೂ ಮಕ್ಕಳ ಶಿಕ್ಷಣಕ್ಕೆ ವ್ಯಕ್ತಿಗಳಿಗೆ ಬೆಲೆ ಕೊಟ್ಟಿದ್ದಾರೆ. ಇದನ್ನು ಡೊಳ್ಳಿನ ಹಾಡುಗಳಲ್ಲೂ ಕೇಳಬಹುದು.

ಸ್ವಾಮಿ ನಮ್ಮಯ ದೇವರ್ ಬಂದಾವ್ ಬನ್ನಿರೆ
ಮಕ್ಕಳು ಪಾಟಿ ಓದ ಕಲಿಯಲಿ
ಮಂದಿ ಒರಟು ಬುದ್ಧಿ ಹೋಗಲಿ
ಉಗುತರ ಧಾನ್ಯವು ಬೆಳೆಯಲಿ
ರೊಕ್ಕವು ಮನೆಮನೆಗ್ಹೆಚ್ಚಲಿ

ಇದಲ್ಲದೆ ಒಂದು ಗಾದೆ ಮಾತು. "ಪಾತ್ರ ಪಾತ್ರ್ಯಾಗದ ಮೇದ, ಕಲಿಸಕ್ಕಾಗದು" ಎಂದು. ಅಂದರೆ ಓದಲಿಕ್ಕೆ ಪ್ರಾರಂಭಿಸುವಾಗ

ಮುಹೂರ್ತ ನೋಡುತ್ತ ಹೋಗುವದು ಸರಿಯಲ್ಲ. ಯಾವದೇ ಕೆಲಸಮಾಡುವಾಗ ಅದರಲ್ಲಿ ಜ್ಞಾನವಿರಬೇಕೆಂಬುದು ಇದರ ಅರ್ಥವಲ್ಲವೆ?

ಇದರಂತೆ ಕಷ್ಟದ ದುಡಿಮೆ ಮಾಡಬೇಕು. ಶ್ರಮಗೌರವ ಬೇಕು ಎಂಬ ವಿಚಾರವನ್ನು ಮನತಟ್ಟುವಂತೆ ಹೇಳುವಲ್ಲಿ ಸಿದ್ಧಿಯನ್ನು ಸಾಧಿಸಿದ್ದಾರೆ ಕೇಳಿ :

ಕಸವ ಹೊಡೆಯುವ ಕೈ ಕಸ್ತೂರಿ ನಾತವ
ಬಸವಣ್ಣ ನಿನ್ನ ಸೆಗಣಿಯು । ಬಳಿವ ಕೈ
ಎಸಳ ಯಾಲಕ್ಕಿ ಗೊನಿನಾತ ॥

ಆದಿ ಉಂಡವ ಕೆಟ್ಟ ಕೇಡ ನೆನೆದವ ಕೆಟ್ಟ ॥
ನೋಡದೆ ಕೆಟ್ಟ ಬೆಳುಭೂಮಿ—

ಒಂದು ಗಾದೆ ಮಾತೂ ಕೂಡ ವ್ಯಂಗ್ಯದಿಂದೊಡಗೂಡಿ ಮಾರ್ಮಿಕವಾಗಿದೆ. "ಕಷ್ಟಕ್ಕ ಕರಿಬ್ಯಾಡ್ರಿ ಊಟಕ್ಕ ಮರಿಬ್ಯಾಡ್ರಿ" ಎಂದು.

೬. ನೀತಿ-ನಡತೆಗಳ ತರಬೇತಿ

ಮುಂದೆ ಮಕ್ಕಳು ಕಿಶೋರಾವಸ್ಥೆ ಹಾಗೂ ಯೌವನದ ಹೊಸ್ತಿಲಲ್ಲಿ ಕಾಲಿರಿಸುವಾಗ ಅವರಿಗೆ ನೀತಿ ಬೋಧೆ ಅಲ್ಲದೆ ನಡೆನುಡಿಯ ಶಿಕ್ಷಣವನ್ನು ಪರೋಕ್ಷವಾಗಿ ಪದ್ಯಗಳ ಅಥವಾ ಇನ್ನಿತರ ಜಾನಪದ ಪ್ರಕಾರಗಳ ಮುಖಾಂತರ ನೀಡುತ್ತಾರೆ. ಇಲ್ಲದಿದ್ದರೆ ಹೆಜ್ಜೆ ತಪ್ಪಬಹುದಲ್ಲವೆ ?

ಕೇದೂಗಿ ಹೊಂಗನ್ನೆ ಕೆನ್ನೀಗೆ ಮರಿಮಾಡಿ
ಮಾಲಕ್ಷ್ಮಿ ಮನಿಗೆ ಬರ್ತಾಳೆ । ತಮ್ಮಯ್ಯ
ನೆರಮನಿ ಸಂಗ ಬಿಡಬೇಕು. ॥

ಸೂಳೆಗೆ ಹೋದವನು ಏನಾದ ಎಂತಾದ
ಕಾಡು ನಾಯಾದ ಕಪಿಯಾದ । ಆ ಮರುಪ
ಸೂಳೆಯ ಕಾಲಿಗೆ ಕೆರವಾದ ॥

ಸುಳ್ಳು ಹೇಳಲಿಬ್ಯಾಡ ಕಳವು ಮಾಡಲಿಬ್ಯಾಡ
ಒಳ್ಳೆಯ ಹಾದಿ ಬಿಡಬ್ಯಾಡ । ನನ ತಮ್ಮ
ಹೊಳ್ಳಿನೋಡಬ್ಯಾಡ ಪರಹೆಣ್ಣ

ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ । ಕಂದಯ್ಯ
ಜೂಜೀಗೆ ಮನವ ಬಿಡದಿರು ॥

ಇನ್ನು ಗೆಳೆತನ ಮಾಡಿದರೆ ಗುಣವಂತರ ಗೆಳೆತನ ಮಾಡಬೇಕು. ಅದು ಜಾತಿಯನ್ನೂ ಮೀರಿದ್ದು. ಎಲ್ಲ ಜಾತಿಗಳಲ್ಲೂ ಒಳ್ಳೆಯವರು. ಕೆಟ್ಟವರು ಇದ್ದೇ ಇರುತ್ತಾರೆ. ಅಲ್ಲದೆ ಅವರು ಜಾತಿಗೆ ಅಷ್ಟು ಮಹತ್ವ ಕೊಟ್ಟಿಲ್ಲ ಎಂಬುದು ಒಂದು ಗಾದೆ ಮಾತಿನಿಂದ ಸ್ಪಷ್ಟ ವಾಗುತ್ತದೆ. ನೋಡಿ: “ಜಾತಿ ತಪ್ಪಿದರೂ ನೀತಿ ತಪ್ಪಬಾರದು” ಎಂದು. ಗೆಳೆತನದ ಬಗೆಗಿರುವ ಗೀತೆಗಳನ್ನು ಕೇಳಿ.

ಗೆಳೆತನ ಕೂಡಿದರ ಗೆಜ್ಜಿ ಜೋಡಿಸಿದ್ಹಾಂಗ
ಗಜರಿಯ ತುಂಬ ಕೊರದ್ಹಾಂಗ | ಗೆಳತೆವ್ವ
ಗುಜ್ಜಿ ನಾವ್ಹ್ಯಾಂಗ ಅಗಲೂನ ॥
ಮನಿಯ ಮುಂದಿನ ಗೆಳತಿ ದನಿಯುಗೂಡಿಸಬಾರ
ದನಿಸುದ್ದ ನಿನ್ನ ಗುಣಸುದ್ದ| ಗೆಳತೆವ್ವ
ಗುಣಕ ಕಟ್ಟೇನಿ ಗೆಳೆತನ.॥
ಒಳ್ಳೆಯವರ ಗೆಳೆತನ ಕಲ್ಲು ಸಕ್ಕರಿ ಹಂಗ
ಕುಲ್ಲರ ಗೆಳೆತನ ಮಾಡಿದರ। ನನ ತಮ್ಮ
ಸಲ್ಲದ ಮಾತು ಬರತಾವ ॥

ನಾನು ನನ ಗೆಳತಿ ಕೂಡಿ ನೀರಿಗೆ ಹೋಗಿ
ಕುಲನ ಕೇಳ್ಯಾರ ಬಹು ಮಂದಿ। ಕೇಳಿದರ
ಕುಲವೆರಡು ನಮ್ಮ ಮನವೊಂದು॥

೭. ಮದುವೆ ಹಾಗೂ ನಂತರದ ವಿಚಾರ

ಮದುವೆಯ ವಯಸ್ಸನ್ನು ಗುರುತಿಸಿ, ಯುವಕ ಯುವತಿಯರ ಭೌತಿಕ ಲಕ್ಷಣಗಳನ್ನು ತಿಳಿದು ಮದುವೆಯ ಯೋಚನೆ ಮಾಡುತ್ತಾರೆ. ಗೀತೆಗಳನ್ನು ಕೇಳಿ :

ಮದುವೆಯ ಮಾಡಬೇಕು ಮದ್ದೋಳಿ ದನಿಯವ್ವ
ಏಸಳೂ ಕೇದೂಗಿ ಮಾದವ್ನ। ನನಬಾಲನ
ಮದುವೀಯ ಕಣಸುಗ್ಗಿ ಮರುದೀನ॥

ಮದುವೆಯಾದ ಮೇಲೂ ಬುದ್ಧಿವಾದ, ಸಾಂತ್ವನ, ಸಮೂಹ ಚಿಕಿತ್ಸೆಗಳೂ ಮೂಡಿ ಬಂದಿವೆ ಈ ಗೀತೆಗಳಲ್ಲಿ:

ಅಂದ ಗಂಡನ ಮಾತ ಬಂದ್ಹೇಳು ನನಮಗಳೆ
ಕುಂದಣದ ಚಿನ್ನ ಕರುಜಾತ। ಆಡಿದ್ಮಾತ
ಬಂದ್ಹೇಳೆ ನಿನ್ನ ತವರೀಗೆ॥

ಮಗಳಾದರೂ ಗಂಡನ ಮನೆಯಲ್ಲಿ ಬೀಸುವಾಗ ಬೀಸುಕಲ್ಲಿಗೆ ಹೇಳುತ್ತಾ ಹಾಡಿ ವ್ಯಕ್ತಿ ಚಿಕಿತ್ಸೆ ಪಡೆಯುತ್ತಾಳೆ.

ಜೋಳ ಬೀಸುವ ಕಲ್ಲೆ ನೀನಾದ್ರು ದಯಮಾಡಿ
ನನ ಮ್ಯಾಲೆ ಕೋಪ ಮಾಡಬ್ಯಾಡ। ನಂತಾಯಿ
ನೀನಾದ್ರು ನನ್ನ ಕಾಪಾಡ॥

ಹಾಗಲಕಾಯಿಯನ್ನು ಹೇಗೆ ಅಟ್ಟರು ಕೈಯಿ
ಹಾಲುಬಿಟ್ಟಿಟ್ರೆ ಕಿರುಕಂಯಿ। ಅತ್ತೀಗೆ
ಹೇಗೆ ಮಾಡಿದರೂ ಹಿತವಿಲ್ಲ॥

ಮುಂದೆ, ಗಂಡನ ಮನಿಯಾಗ ಕಂಡ ಬಾಳುವೆಯನ್ನು ಓಂದಿನಾ ಗಾಡಿ ಪುರತೇವ। ಎನ್ನುವ ಪದ್ಯದಲ್ಲಿ ಸಮೂಹ ಚಿಕಿತ್ಸೆ ಮಾಡಿ ಬಂದಿದೆ. ಇದೂ ಅಲ್ಲದೆ ಗಂಡಹೆಂಡಿರು ತಮ್ಮ ಜಗಳವನ್ನು ತಾವೇ ಬಗೆಹರಿಸಿಕೊಳ್ಳುವ ವಿಧಾನವೂ ಇದೆ. ಇದೂ ಒಂದು ಚಿಕಿತ್ಸೆಯೇ ಆಗಿದೆ. ಉದಾಹರಣೆಗೆ ಒಂದು ಗಾದೆ ಹಾಗೂ ಒಂದು ಗೀತೆ:- 'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ' ಎಂಬುದು ಗಾದೆಯಾದರೆ

ಗಂಡ-ಹೆಂಡಿರ ಜಗಳ ಗಂಧ ತೀಡಿದ್ಹಾಂಗ
ಲಿಂಗಕ್ಕ ನೀರ ಎರೆದ್ಹಾಂಗ। ಹಿರಿಹೊಳಿ
ಗಂಗವ್ವ ಸಾರಿ ಹರಿದ್ಹಾಂಗ॥ - ಎಂಬುದು ಗೀತೆ.

ಅಂತೂ ಮೀರಿ ಬಂದ ಜಗಳಗಳ ತೀರ್ಮಾನ ಮಾಡಲು ನಿವಾರಿಸಲು ಕುಟುಂಬ ನ್ಯಾಯಾಲಯಗಳ ಅವಶ್ಯಕತೆಯನ್ನು ಒತ್ತಿಹೇಳಿದಂತಿದೆ ಜಾನಪದ. ಅಂದರೆ ಗಂಡ-ಹೆಂಡಿರ ಜಗಳ. ತಾಯಿ-ಮಕ್ಕಳ ಜಗಳ, ಅಣ್ಣ-ತಮ್ಮಂದಿರ ಜಗಳ, ಮೈದುನ ನೆಗೆಣ್ಣಿಯರ ಜಗಳಗಳ ಸ್ವರೂಪವನ್ನು ಅರಿತುಕೊಂಡು ಜಗಳ ಬಗೆಹರಿಸಬೇಕಾಗುತ್ತದೆ. ಜನಪದವು ನಿಜಕ್ಕೂ ಕುಟುಂಬ ನ್ಯಾಯಾಲಯಗಳಿಗೆ ಇಂಥ ಜಗಳಗಳ ಸ್ವರೂಪ-ಸಂಬಂಧಗಳನ್ನು ಒದಗಿಸುವುದರಲ್ಲಿ ಸಂದೇಹವಿಲ್ಲ. ಮತ್ತೆ ಹಲವು ಗಾದೆ, ಗೀತೆಗಳಿಂದ ಇದನ್ನು ಉದಾಹರಿಸಬಹುದು. "ತಾಯಿ ಮಕ್ಕಳ ಜಗಳ ತಾಳ ಬಾರಿಸಿದಾಂಗ'' ಗಾದೆ..

ನನ್ನವ್ವ ನನ ತಾಯಿ ಹಣ್ಣ ಹಾಗಲಕಾಯಿ
ಸುಮ್ಮನೆ ಬೈದ ಗರತೀಗ। ಹಡೆದವ್ವ
ಉಣ್ಣೇಳ ಕಾಲ ಹಿಡಿದೇನ॥

ಮಡದಿಯು ಬಡಿದಾಸು ಮನದಾಗ ಮರುಗ್ಯಾನು
ಒಳಗ್ಹೋಗಿ ಕಾಲ ಹಿಡಿದಾನು। ಕೇಳ್ಯಾನು
ನಾ ಹೆಚ್ಚೋ ನಿನ್ನ ತವರ್ಹೆಚ್ಚೋ॥

ಅಣ್ಣ ತಮ್ಮರ ಜಗಳ ನಿನ್ಯಾಗಿ ಮನ್ಯಾಗಿ
ಬಣ್ಣದ ಬಾಗಿಲ ಎರಡಾಗಿ। ಹಡದವ್ವ
ಸಣ್ಣವಗ್ಹೇಳ ಸನ್ಮತಿಯ॥

ಭಾವಯ್ಯ ಮುನಿದರ ಬಲಗಾಲ ಹಿಡಿದೇನ
ಭಾವಯ್ಯನ ಮಡದಿ ನೆಗಣ್ಣಿ। ಮುನಿದರ
ಬಾರಕ್ಕನೆಂದು ಕರದೇನ॥

ಮೈದುನರ ಮುನಿಸ್ಯಾಕ ನನ ಕೂಡ ಮಾತಿಲ್ಲ
ನಾನೇನಂದಿಲ್ಲ ಅವರಿಗೆ । ಒಳಗಿರುವ
ಒಯ್ಯಾರಿ ಹೇಳ್ಯಾಳ ಒಳಮಾತ

ಬೀಸಲಿಕ ಕೂತೀನ ಕೂಸ ನನ ತೊಡಿಮ್ಯಾಲ
ವಾಸ್ಯಾಡ ಬ್ಯಾಡ ನೆಗೆಯೇಣಿ । ನಿನ ಕೆಲಸ
ತಾಸೊತ್ತಿನಾಗ ತಿರುವೇನ ॥

ತಾಯಿ ಮಕ್ಕಳ ಜಗಳ ನ್ಯಾಯ ಮಾಡುವರ್ಯಾರ
ವಾಲಿಗಿ ಮುತ್ತು ಒಜನೇನ । ಹಡದಮ್ಮ
ನಾ ಆಡಿದ ಮಾತ ನಿಜವೇನ ॥

ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ
ತನ್ನಂಗ ತನ್ನ ಮಗಳಂಗ । ನೋಡಿದರ
ಕಣ್ಣ ಮುಂದೈತಿ ಕೈಲಾಸ ॥

ಅಂಗೀಯು ವ್ಯಾಲಂಗಿ ಛಂದೇನೊ ನನ ರಾಯು
ರಂಭಿವ್ಯಾಲ ರಂಭಿ ಪ್ರತಿರಂಭಿ । ಬಂದರ
ಛಂದೇನೊ ರಾಯು ಮನಿಯಾಗ॥

ನಾಯಿ ನೇರಲ ಹಣ್ಣು ಸಾಲಿಗೆಗೆ ಕಡುರುಚಿಯು
ಕೊಂಬೆ ಜಾರಿದರೆ ದುಸ್ಮಾನ | ಮೇಗಳ್ಕೇರಿ
ರಂಭೆಗಾಡಿದರ ತಲೆ ಎರವು ॥

ಸಂಸಾರವೆಂಬುದು ಸಾಗರ ಹೊಳಿಯವ್ವ
ಈಸ ಬಲ್ಲವಗ ಎದಿಯುದ್ದ | ಗಿಣಿರಾಮ
ಓದ ಬಲ್ಲವಗ ಕೈಲಾಸ ॥

ಇನ್ನು ಮದುವೆ ಮತ್ತು ಇನ್ನಿತರ ಕೆಲವು ಸಮಾರಂಭಗಳಲ್ಲಿ ಒಡಪು ಹಚ್ಚಿ ಹೆಂಡತಿ, ಗಂಡನ ಹೆಸರನ್ನು ಗಂಡ, ಹೆಂಡತಿಯ ಹೆಸರನ್ನು ಹೇಳುವದುಂಟು. ಹೀಗೆ ಒಡಪುಗಳಲ್ಲಿ ಅತ್ತೆ, ಮಾವ ನಾದುನಿ, ಭಾವ, ಮೈದುನ, ನೆಗೆಣ್ಣಿಯರನ್ನೂ ಸೇರಿಸುತ್ತಾರೆ. ಇವುಗಳಲ್ಲಿ ಸೌಂದರ್ಯ, ಪ್ರೇಮ, ಹಾಸ್ಯರಸಗಳಲ್ಲದೆ ವಿಡಂಬನೆ, ವಿಮರ್ಶೆಗಳೂ ಬರುತ್ತವೆ. ಇವು ಮನರಂಜನೆಯ ಜೊತೆಗೆ ಮನಪರಿವರ್ತನೆಗೆ, ಮಧುರ ಸಂಬಂಧಗಳಿಗೆ ಸಹಾಯಕಾರಿ. ಉದಾ :-

ಹೆಂಡತಿ : ಗುಣದಿಂದ ಹೇಳುವೆನು ಗುರುವಿನ ಹೆಸರ
ಮನದಿಂದ ಹೇಳುವೆನು ಮೈದುನರ ಹೆಸರ
ನಗು ನಗುತ್ತ ಹೇಳುವೆನು ಅತ್ತೆ ಮಾವರ ಹೆಸರ....
ಕುಂತ ಸಭೆಯಲ್ಲಿ ಹೇಳುವೆನು ಪತಿದೇವರ ಹೆಸರ

ಮಾಲಿನಾಗ ಮಾಲು ಹಿರೇರು ಕಟಿಸಿದ ಮಾಲು
ಅವರು ಹೊರೋದು ಹಸುರು ಶ್ಯಾಲು
ಅವರು ಮಾಡೋದು ಸೂಳೇರ ಪಾಲು...

ಗಂಡ:- ಬಂಗಾರ ಬದನಿಕಾಯಿ, ಸಿಂಗಾರ ಚವಳಿಕಾಯಿ
ಊಟಮಾಡು ಅಂದ್ರ, ಶೀಟಿಮಾಡ್ತಾಳ...
ಮೆಣಸಿನ ಕಾಯಿ ಹಿಂಡಿ ತಿರುವು ಅಂದ್ರ
ತನ್ನ ಕುಂಡಿ ತಿರವುತಾಳ...

ಗುಂಗರ ಗೂದಲ, ಸಿಂಗಾರ ತುಟಿ
ಬಂಗಾರ ಕೋಟಿಯಲ್ಲಿ ಕುಂತು
ಬಾನಾ ಬಿಸಿತಾಳ...

ಇಬ್ಬರು ಹೆಂಡರನ್ನು ಮದುವೆಯಾದರೆ ಅಥವಾ ಉಡಕೀ ಹೆಂಡತಿಯನ್ನು ಮಾಡಿಕೊಂಡರೆ ಬಂದೊದಗುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ ಕೆಲ ಗೀತೆಗಳು :

ಇಬ್ಬರೆಂಡರನಾದ ಏದಿಯು ಮುಳ್ಳಾದ
ಕೋಡಗನಾದ, ಕೊರವಾದ । ಬಾಲ್ಯಾರು
ಮಾಡಿಟ್ಟ ಸಿಂಬಿ ಅರಿವ್ಯಾದ॥

ಇದು ಹಿಂದು ವಿವಾಹ ಕಾಯಿದೆ (Hindu Marriage Act)ಗೆ ಕಳಶಪ್ರಾಯವಾಗಿದೆ. ಇದರಂತೆ ;

ಉಡಕೀಯ ಹೆಂಡೂತಿ ಉಡಿಯಾನ ಲಿಂಗೆಂದ
ಕಿರಿ ಬಳ್ಳು ಹಿಡಿದ ಮಡದೀಯ ಸಂಗಾಟ
ಸಿಡಿ ಮಿಡಿಯಾಕೊ ಸಿರಿರಾಯ॥

೮. ಅಂತ್ಯಕ್ರಿಯೆ ವಿಧಿಗಳಲ್ಲಿ ಚಿಕಿತ್ಸೆ

ಬದುಕುವ ದಾರಿಯನ್ನು ತೋರುವ ಜನಪದವು ಮನೆಯಲ್ಲಿ ಯಾರಾದರೂ ಮರಣಕ್ಕೀಡಾದರೆ ಇದ್ದವರನ್ನು ಬದುಕಿ

ಸುವ ಮಾರ್ಗವನ್ನೂ ಹೇಳಿಕೊಟ್ಟಿದೆ. ಸತ್ತವರ ಮನೆಯಲ್ಲಿ ಒಂದು ಆಘಾತದ ವಾತಾವರಣ. ಕರುಳೇ ಕಿತ್ತು ಬರುವ ಸನ್ನಿವೇಶಗಳು ಅನೇಕ. ಇಂಥ ಪ್ರಸಂಗಗಳಲ್ಲಿ ಆಘಾತವಾದವರಿಗೆ ಸಾಂತ್ವನನೀಡಲು ಬಂಧು ಬಳಗ ನೆರೆಹೊರೆ ಮಿತ್ರರೂ ಅಷ್ಟೇ ಏಕೆ ಶತ್ರುಗಳೂ ಕೂಡ ಸೇರುತ್ತಾರೆ. ಈ ಕಾರ್ಯವು "ಶಿವನಬಿಟ್ಟಿ" ಎನ್ನುತ್ತಾರೆ ಕೆಲವರು ಅತ್ತು ಅಳಿಸುತ್ತಾರೆ, ಕೆಲವರಿಗೆ ಅಳಲಿಕ್ಕಾಗದು. ಅಂಥ ಆಘಾತ ದಿಗ್ಭ್ರಮೆಯಾಗಿರುತ್ತದೆ. ಅವರು ಅಳುವದಿಲ್ಲ. ಅಳದಿದ್ದರೆ ಮಾನಸಿಕ ಭೌತಿಕ ಆಘಾತ ಆತ್ಮಹತ್ಯೆಗಳಂಥ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕಾರಣ ಹಣ ಕೊಟ್ಟು ಕೆಲವರನ್ನು ಕರೆಸಿ ಅಳಿಸುತ್ತಾರೆ. ಇದೊಂದು ಮಾನಸಿಕ ಚಿಕಿತ್ಸೆ. ಹೀಗೆ ಗುಂಪು ಸೇರಿ ಧೃತಿ ಮತಿ ಗತಿಗೆಡುವ ವಾತಾವರಣಗಳನ್ನು ಹಿಮ್ಮೆಟ್ಟಿಸುತ್ತಾರೆ. ಹಣಕೊಟ್ಟು ಕರೆಸಿ ಅಳಿಸುವ ಕಾರ್ಯ ಇನ್ನೂ ಕರ್ನಾಟಕ, ಮಹಾರಾಷ್ಟ್ರ, ಗುಜರಾಥ ರಾಜ್ಯಗಳ ಕೆಲಭಾಗಗಳಲ್ಲಿ ಕಂಡುಬಂದಿದೆ. ಹೀಗೆ ಅಳುವವರು ರಾಗಬದ್ಧವಾಗಿ ಹಾಡಿ ಕೊಂಡು ಎದೆ ಎದೆ ಬಡಕೊಂಡು ಅಳುತ್ತಾರೆ. ಇಲ್ಲಿ ಶೋಕರಸ ಭರಿತ ರಾಗದಲ್ಲಿಯೇ ಅವರು ಹಾಡಿಕೊಂಡು ಅಳುತ್ತಾರೆ. ಇದನ್ನು ಕೇಳಿದರೆ ಎಂಥ ಕಲ್ಲೆದೆಯೂ ಕರಗಿ ಕಣ್ಣೀರು ಧಾರೆಯಾಗಿ ಸುರಿಯುತ್ತದೆ. ಇದು ಸಮಾಜದಲ್ಲಿಯೇ ಉದಯಿಸಿ ನಡೆದು ಬಂದ ಚಿಕಿತ್ಸೆ (Inbuilt therapy). ಆದರೆ ಇಂಥ ಪ್ರಸಂಗಗಳಲ್ಲಿ ಕೆಲವರು ಆಸ್ಪತ್ರೆಯಲ್ಲಿ ಟಿಯರ್‌ಗ್ಯಾಸ್(Teargas)ಮುಖಾಂತರ ಅಳಿಸುತ್ತಾರೆ. ಇದು ಪರಿಣಾಮಕಾರಿಯಾಗಲಾರದು. ಇಲ್ಲಿ ಅತ್ತು ಅಳಿಸಬೇಕು. ಅದಕ್ಕೆ ಹಾಡಿಕೊಂಡು ಅಳಬೇಕಾಗುವದು. ಈ ಬಗೆಗೆ ಗೀತೆ ನೋಡಿ

ಅಯ್ಯೊ ಎಪ್ಪಾ ಎಂಥಾ ಪುಡಿದ್ದೆಲ್ಲೊ
ಕಾರಾ ಮುಂಡಕ್ಕ ಕಾಡಿ ಅತ್ತಿದ್ದೆಲ್ಲೊ
ಅಯ್ಯೋ ಎಪ್ಪಾ ಏನ್ ಜೀವಿದ್ದೆ ನನ ಮ್ಯಾಲ
ಜೇನ್ ತುಪ್ಪ ಮುಸೀತುಕ ತಂದ್ಕೊಟ್ಟೆಲ್ಲೆ ಎಪ್ಪಾ-
ಮುಂತಾಗಿ

ಇದೂ ಅಲ್ಲದೆ ಸಂಬಂಧಿಕರು ಊರವರು ಕೆಲದಿನಗಳ ನಂತರ ಕಿಥಿ ಮಾಡಲು ಬರುತ್ತಾರೆ. ಇದೂ ಅಷ್ಟೇ ಮಹತ್ವದ ರಿವಾಜು. ಅಂದರೆ ಆಘಾತದಿಂದ ಬಳಲಿದ ಕುಟುಂಬ ಚೇತರಿಸಿಕೊಳ್ಳಲು ನೆರವು ನೀಡುತ್ತದೆ, ಈ ಸಮೂಹ. ಏನಾದರೂ ಸಮಸ್ಯೆಗಳಿದ್ದರೆ ನಿವಾರಿಸುತ್ತದೆ. ಇದೊಂದು ಅನುವರ್ತಿ ಕಾರ್ಯ (follow-up work) ಇದ್ದಂತೆ. ಹಾಗೆಯೇ ಸತ್ತವರಿಗೆ ಅತ್ತರೆ ಅತ್ತವರು ಸಾಯರೆ? ಎಂಬ ಗಾದೆ ಮಾತನ್ನು ಹೇಳಿ, ಹುಟ್ಟಿದ ಮೇಲೆ ಮರಣ ತಪ್ಪಿದ್ದಲ್ಲ ಎನ್ನುವ ನಿರ್ಧಾರದ ನುಡಿಯಿಂದ ಸಂತೈಸುತ್ತಾರೆ.

ಇಷ್ಟೆಲ್ಲ ಆದಾಗ್ಯೂ ಜೀವನದಲ್ಲಿ ಕಷ್ಟ ಕಾರ್ಪಣ್ಯಗಳು ಆಗು ಹೋಗುಗಳು ಪಡುವ ಪಾಡುಗಳು ಮುಗಿಯುವದೇ ಇಲ್ಲ. ಅದಕ್ಕೆಂದೆ "ತೀರ್ಯಾವ ನಿಮ ಜೋಳ ಉಳಿದಾವ ನಮ ಹಾಡ" ಎಂದು ಹಾಡಿದ್ದಾರೆ. ಹಾಡಿ ಕಷ್ಟದ ಪಾಡುಗಳನ್ನು ತೋಡಿ ಕೊಂಡು ಭಾರವಾದ ಜೀವನವನ್ನು, ಭಾರವಾದ ಮನವನ್ನು ಹಗುರು ಮಾಡಿಕೊಂಡಿದ್ದಾರೆ. ಇಷ್ಟೆಲ್ಲ ಜನಪದ ಭಂಡಾರದಿಂದ ವಿವಿಧ ಬಗೆಯ ಸಂಕಟಗಳಿಗೆ ಭಿನ್ನ ಭಿನ್ನವಾದ ಸಾಂತ್ವನಗಳು ದೊರೆತು ಕಷ್ಟ ಕೋಟಲೆಗಳು ದೂರವಾಗುವುದರಲ್ಲಿ ಸಂದೇಹ ವಿಲ್ಲ. ಆದಕ್ಕೇ ಮತ್ತೊಮ್ಮೆ ಕೇಳಿ.

ಮುತ್ತು ಮಾಣಿಕ ಬೇಡ ಮತ್ತೆ ಸಂಪದ ಬೇಡ
ಸುತ್ತು ಕೋಟೆಯು ವೈಭವ ಬೇಡ। ನನ್ನಪ್ಪ
ಸುತ್ತೆಲ್ಲ ಜನಪದ ಹಾಡಿರಲಿ॥

೯. ಸಾಮಾಜಿಕ ಸಮಸ್ಯೆಗಳು

ಅ) ಮದುವೆಯಾದ ಹೆಣ್ಣುಮಕ್ಕಳು, ಲೈಂಗಿಕ ಅಪರಾಧ ಮತ್ತು ಸೂಳೆಗಾರಿಕೆಗಳಿಗೆ ಮನಸೋಲುವಲ್ಲಿ ಗಂಡನ ಷಂಡ ತನವೂ (Impotency) ಒಂದು ಕಾರಣ ಎಂದು ಸಮಾಜ ವಿಜ್ಞಾನ ಹೇಳಿದೆ. ಅದನ್ನೇ ಈ ಕೆಳಗಿನ ಪದ್ಯದಲ್ಲಿ ನೋಡಿ, ಎಷ್ಟು ಮಾರ್ಮಿಕವಾಗಿದೆ!

ಕರಿಯು ಕಂಬಳಿ ತಂದು ಹೊದಿಯಲಾರದ ಮೇಲೆ
ಅದ್ಯಾಕೆ ತಂದೆ ದರವೇಸಿ। ಕಂಡವರ
ಹೆಣ್ಣು ಮದುವ್ಯಾಗಿ ಗೋಳ ಹೊಯ್ಕೊಂಡೆ॥

ಇದನ್ನು ತಿಳಿದು ಅಂಥ ಗಂಡಸರು ಮದುವೆಯಾಗದಿರುವದೇ ಒಳಿತು. ಇದರಂತೆ ಬಹುಕಾಲ ಹೆಂಡತಿಯನ್ನು ತವರುಮನೆ ಯಲ್ಲೇ ಬಿಟ್ಟು ಇರುವದೂ ಸಮಸ್ಯೆಯನ್ನೊಡ್ಡುತ್ತದೆ. ಅದನ್ನು ತಡೆಯಲು ಕೇಳಿ.

ತಂದ ಹೆಂಡತಿ ಪತಿವ್ರತೆಯಾದರೆ
ತೌರು ಮನೇಲಾರು ತಿಂಗ್ಳು ಬಿಡಬಾರದು
ಬಿಟ್ಟರೇಕೆ ಬಿಡುವಲ್ಲಿ ಮತ್ತೆ ಒಂದು ಹೇಳತೀನಿ
ಹೆಂಡ್ತಿಮನೀಗ್ಹೋಗಿ ಬರೋದ್ ಬಿಡಬಾರದು
ಬ್ಯಾಡ್ಡನಾಗಬಾರದು ॥

ಆ) ವಯಸ್ಸಿನ ಸಮಸ್ಯೆ :

ಸಾಮಾನ್ಯವಾಗಿ ಒಬ್ಬ ಮನುಷ್ಯನು ನೂರುವರುಷ ಬದುಕುತ್ತಾನೆಂದು ಗ್ರಹಿಸಿದಾಗ, ಹತ್ತು ಹತ್ತು ವರ್ಷಗಳ ಹಂತ ಗಳಲ್ಲಿ ಅವನ ನಡೆವಳಿಕೆ ಹೇಗೆ ಬದಲಾಗುತ್ತ ಹೋಗುತ್ತದೆ ಎಂಬುದನ್ನು ತಿಳಿಪಡಿಸುವ ಒಕ್ಕಣಿಕೆಯು ಗೀತೆಯೊಂದಿದೆ. ಅದು ಇತಿಂದೆ.

ಹತ್ತಕ್ಕೆ ಹಕ್ಕಿ
ಇಪ್ಪತ್ತಕ್ಕೆ ನಕ್ಕಿ
ಮುವತ್ತಕ್ಕೆ ಮುರುಕ
ನಾಲ್ವತ್ತಕ್ಕೆ ನಾಕ್‌ತರ
ಐವತ್ತಕ್ಕೆ ಅರುವು
ಅರವತ್ತಕ್ಕೆ ಮರುವು
ಎಪ್ಪತ್ತಕ್ಕೆ ಕಾಗಿ
ಎಂಭತ್ತಕ್ಕೆ ಬಾಗಿ
ತೊಂಭತ್ತಕ್ಕೆ ಗೂಗಿ
ನೂರಕ್ಕೆ ಹೋಗಿ

ಅಂದರೆ ಎಪ್ಪತ್ತಕ್ಕೆ ಕಾಗಿಯಂತೆ ವಟಗುಟ್ಟುವ ಅವಸ್ಥೆಯಾಗಲಿ ಇಪ್ಪತ್ತಕ್ಕೆ ನಗುತ್ತ, ನೆಗೆದಾಡುವುದಾಗಲಿ ಎಲ್ಲರಿಗೂ ಸಾಮಾನ್ಯ ಅಲ್ಲದೆ ಒಂದು ಗಾದೆಮಾತು, "ಮೀಸಿ ಬಂದವಗೆ ದೇಶ ಕಾಣ್ಲೊಲ್ಲ ಮಲಿ ಬಂದವಳಿಗೆ ನೆಲ ಕಾಣ್ಲೊಲ್ಲ" ಎಂದು. ಇವುಗಳಿಂದ ಚಿಕ್ಕ ವಯಸ್ಸಿನವರು, ಹರೆಯದವರು, ಮುದುಕರ ಸಮಸ್ಯೆಗಳನ್ನು ತಿಳಿಯಬೇಕು. ಅಲ್ಲದೆ ಮುದುಕರಾದವರು, ತಾವೂ ಮೂವತ್ತಕ್ಕೆ ಮುರಕಾಟ ಮಾಡಿದ್ದೇವೆಂದು ಉಳಿದವರ ಸಮಸ್ಯೆಗಳನ್ನು

ಅರಿತು ಬಾಳಬೇಕು. "ಹಣ್ಣೆಲೆ ಉದುರುವಾಗ ಹಸಿರೆಲೆ ನಗದೆ, ಹಸಿರೆಲೆ ಖುಷಿ ಪಡುವಾಗ ಹಣ್ಣೆಲೆ ಮರುಗದೆ ಬಾಳಬೇಕೆಂಬು ದನ್ನು ಈ ಒಕ್ಕಣಿಕೆಯು ಮಾತು ಹಾಗೂ ಗಾದೆಗಳಿಂದ ತಿಳಿಯು ಬಹುದಾಗಿದೆ.

ಇ) ವಿಧವಾ ಸಮಸ್ಯೆ

ಸಮಾಜವು ಗಂಡಸತ್ತ ವಿಧವೆಗೆ ಇನ್ನೂ ನೆಮ್ಮದಿ ಗೌರವ ಗಳನ್ನು ಕೊಟ್ಟಿಲ್ಲ. ಸುಧಾರಿಸಿದ ಹಾಗೂ ನಾಗರಿಕ ಸಮಾಜದ ಲ್ಲಿಯೂ ವಿಧವೆಯು ಪಡುದ ಕಷ್ಟ ಅಷ್ಟಿಲ್ಲ. ಅನೇಕ ಮಾನಸಿಕ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಆದರೆ ಜಾನಪದದಲ್ಲಿ ಅವಳಿಗೆ ಒಂದು ಪವಿತ್ರವಾದ, ಗೌರವಯುತ, ಸ್ಥಾನವನ್ನು ಕೊಟ್ಟಿದ್ದಾರೆ.

ಗಂಡ ಸತ್ತವ್ವಗ ರಂಡೆಮುಂಡೆನಬೇಡ
ಕಂದನ ಹಿಡಿದು ತಪಹಾಳ । ಅವಳಿಗೆ
ಗಂಗಾದೇವೆಂದು ಕರಿಬೇಕು॥

ಹೀಗಿರುವಾಗ ಅವಳಿಗೆ ಯಾವ ಸಾಮಾಜಿಕ ಸಮಾರಂಭ ದಲ್ಲೂ ಮೊದಲನೇ ಸ್ಥಾನ ಕೊಡಬೇಕು. ಯಾಕೆಂದರೆ ಅವಳು ಗಂಗಾದೇವಿಯಂತೆ ಪವಿತ್ರಳು. ಇದು ಅವಳಿಗೆ ಜೀವಿಸಲು ಧೈರ್ಯ ಕೊಡುವದಲ್ಲದೆ ಇದ್ದ ಮಗುವನ್ನು ನಾಗರಿಕನನ್ನಾಗಿ ಮಾಡಲು ಆತ್ಮಬಲವನ್ನು ನೀಡುತ್ತದೆ. ಇಲ್ಲದಿದ್ದಲ್ಲಿ ಮಗು ಅನಾಥನಿರುವ ಜೊತೆಗೆ ಅಪರಾಧಿಯೋ ಭಿಕ್ಷುಕನೋ ಆಗಿ ಸಮಾಜಕ್ಕೆ ಕಳಂಕ ಬಳಿಯುಬಹುದು. ಇದನ್ನರಿತಾದರೂ ನಾಗರಿಕ ಸಮಾಜ ಅವಳ ಸಮಸ್ಯೆಗಳನ್ನು ಬಗೆಹರಿಸಬೇಕು.

ಈ) ಭಿಕ್ಷಾಟನೆ, ಮದ್ಯಪಾನ ಹಾಗೂ ಅಪರಾಧ

ಭಿಕ್ಷಾಟನೆ, ಮದ್ಯಪಾನ, ಅಪರಾಧ ಹಾಗೂ ಇತರ ಸಮಸ್ಯೆಗಳ ಬಗೆಗೂ ಗಾದೆ ಹಾಗೂ ಗೀತೆಗಳಿವೆ.

"ಕೊಟ್ಟು ಕೆಟ್ಟವರಿಲ್ಲ ತಿರಿದು ಬದುಕಿದವರಿಲ್ಲ." ಇದರಂತೆ "ಇದ್ದೂರಹಗಿನಲ್ಲಿ ಕದ್ದುಕೊಂಬವರ ನೆರೆ ಇಲ್ಲ" ಇವು ಗಾದೆಗಳು. ಭಿಕ್ಷಾಟನೆ ಅಪರಾಧ ಸಮಸ್ಯೆಗಳನ್ನು ಕುರಿತಾದವು. ಇನ್ನು ಮದ್ಯಪಾನ ಶೋಷಣೆಗಳ ಬಗೆಗೆ ಗೀತೆ ಕೇಳಿ.

ಸಿಂದೀಯ ಪರಕೆವ್ವ ಪಟೂಕ್ಷ ಬೆಳೆದೆವ್ವ
ಕ್ವಾಣನ ಮೂಲೆ ಮರೆದೆವ್ವ | ಸಿಂದೆವ್ವ
ಒಳ್ಳೆವರ ಮಾನ ಕಳೆದೆವ್ವ ||

ಬುದ್ಧಿವಂತನ ಮಡದಿ ಇದ್ದಗದ್ದಿಗೆ ಮೇಲೆ
ಬುದ್ಧಿ ಇಲ್ಲದ ಪೆದ್ದ ನಿನ ಮಡದಿ | ಕಂಡೋರ್‍ಗೆ
ನೀರ ಹೊರುತಾಳೆ ||

ಮುಮ್ಮಾವೀಯ ಮಾಡ್ಯಾಕೆ ಒಡೆಯ ಕೊಟ್ಟನೊ ಹಣಾ
ಮದುಮೀಯ ಮಗನು ಮದುಮಗಳು |
ಬಡ್ಡಿಗೆ ಮರಿಮಕ್ಕಳೆಲ್ಲ ಸಾಲಗಾರರು ||

೧೦. ಹಬ್ಬ–ಹರಿದಿನಗಳು ಹಾಗೂ ಸಮೂಹ ಚಿಕಿತ್ಸೆ

ನಾಗರ ಪಂಚಮಿ, ದಸರಾ, ಸಂಕ್ರಾಂತಿ, ಅಲಾವಿ ಹಬ್ಬ, ಹೋಳೀಹುಣ್ಣಿಮೆ ಇತ್ಯಾದಿ ಹಬ್ಬ ಹರಿದಿನಗಳ ಸರಿಯಾದ ಆಚರಣೆಯಿಂದ ಸಮಾಜ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳಬಹುದಾಗಿದೆ.

ನಾಗರ ಪಂಚಮಿ ಹೆಣ್ಣುಮಕ್ಕಳ ಹಬ್ಬ. ಮದುವೆಯಾದ ಹೆಣ್ಣು ಮಕ್ಕಳು ತವರು ಮನೆಗೆ ಬಂದು ತಮ್ಮ ಗಂಡಂದಿರ ಮನೆಗಳಲ್ಲಿ ನಡೆದ ಮಾತು ಇಲ್ಲವೆ ಸಮಸ್ಯೆಗಳನ್ನು ಹೇಳಿಕೊಂಡು ಅವಕ್ಕೆ ಸಾಂತ್ವನ. ಉಪಾಯಗಳನ್ನು ಕಂಡುಕೊಳ್ಳುತ್ತಾರೆ. ಮಹಿಳೆಯರೇ ಕೂಡಿ, ಮಾತನಾಡಿ, "ಎಲ್ಲರ ಮನೆಯ ದೋಸಿ ತೂತೆಂದು" ಎಲ್ಲರ ಹಾಡು ಇದೇ ಎಂದು ಹಾಡುತ್ತಾರೆ.

ಗಂಡನ ಮನಿಯಾಗ ಕಂಡಬಾಳುವೆಯನ್ನ
ಹಿಂಡಿನಾಗಾಡಿ ಮರತೇವ ॥

ಎಂದು ಜೋಕಾಲಿ ಆಡಿ ಹಾಡಿ, ಒಂದು ನಿರ್ಧಾರಕ್ಕೆ ಬಂದು ಮತ್ತೆ ತಮ್ಮ ಗಂಡಂದಿರ ಮನೆಗಳಿಗೆ ತೆರಳುತ್ತಾರೆ. ವರ್ಷವಾಗುತ್ತಲೆ ಮತ್ತೆ ಬಂದು ತಮ್ಮ ಸಮಸ್ಯೆಗಳಿಗೆ ತಕ್ಕ ಸಾಂತ್ವನಗಳನ್ನು ಪಡೆಯುತ್ತಾರೆ. ಇದು ಒಂದು ಸಮೂಹ ಚಿಕಿತ್ಸೆಯಾದಂತಿದೆ.

ಇದರಂತೆ ದಸರಾ ಅಥವಾ ಮಹಾನವಮಿ ಹಬ್ಬದಲ್ಲಿ ಒಬ್ಬರಿಗೊಬ್ಬರು ಬನ್ನಿಕೊಟ್ಟು ಕೊಂಡು ತಮ್ಮ ಹ್ಯಾವ ಪಂಥ ವೈಷಮ್ಯಗಳನ್ನು ಮರೆತು ಕೋಲು ಹಾಕಿ ಕುಣಿದು ತಮ್ಮ ಸಮಾಜ ಸಂಬಂಧಗಳನ್ನು ಮಧುರಗೊಳಿಸಿಕೊಳ್ಳುತ್ತಾರೆ. ಹಾಡು ಕೇಳಿ.

ನಾವು ಕುಣಿಯೋಣ ಬನ್ನಿ ಹ್ಯಾವ ಮರಿಯೋಣ ಬನ್ನಿ
ಜೀವ ಒಂದಾಗಿ ಇರಬನ್ನಿ ಕೋಲು ಕೋಲು
ಇಂದು ಮುಡಿಯುವ ಬನ್ನಿ ಮುಂದೆಮಗೆ ಹೊನ್ನಾಗಿ
ಕುಂದ್ಯಣಮಾರುತಿ ಬೆಳಗುದಕ ಕೋಲು ಕೋಲ ॥

ಇನ್ನು ಅಲಾವಿ ಹಬ್ಬ ಮುಸಲ್ಮಾನ ಬಂಧುಗಳ ಹಬ್ಬ. ಇದರಲ್ಲಿ ಹಿಂದುಗಳೂ ಇನ್ನಿತರರೂ ಪಾಲ್ಗೊಳ್ಳುತ್ತಾರೆ. ಇದು

ಸಹಾಯವಾಯಿತು. ಸಮುದಾಯಗಳ ನಡುವೆ ಮಧುರ ಬಾಂಧವ್ಯದ ಸೇತುವೆ ಇಲ್ಲಿ ಹೆಚ್ಚು ಕುಣಿತ ಆಕರ್ಷಣೀಯವಾಗಿರುತ್ತದೆ. ಇಲ್ಲಿ ಬರುವ ಲಾವಣಿ ದಾಟಿಯ ಹಾಡುಗಳು ನೀತಿ ಬೋಧೆ ಮಾಡುತ್ತ ಸಮಾಜ ಸುಧಾರಣೆಯ ಪಾತ್ರವನ್ನು ವಹಿಸಿಕೊಳ್ಳುತ್ತವೆ ಹಾಡು ಕೇಳಿ.

ಕಲಿಯುಗದ ವರ್ತಮಾನ ಹೇಳತೀನಿ ಕೇಳ್ರಾ
ರೂಪಾಯಿ ಇದ್ದರೆ ಇಷ್ಟತಾಗುವದು ತೋಲಾ
ಬಿಂಗ ತಿಳಿದಿಲ್ಲ

ಮುತ್ತಿನಂತ ಈ ಬಾಲಗ
ಹ್ಯಾಂಗ ಇಡಬೇಕೊ ಮಣ್ಣಾಗ
ಪ್ರಾಣ ಹೋದರ ಕೀರ್ತಿ ಹೋಗಲಿಲ್ಲ

ಮಕರ ಸಂಕ್ರಾಂತಿಯ ಹಬ್ಬದ ದಿನ ಅನೇಕರು ಹೊಳೆಯಲ್ಲಿ ಸ್ನಾನಮಾಡಿ ಬಂದು ಮನೆ ಮನೆಗೆ ಎಳ್ಳು ಬೀರುತ್ತಾರೆ. ಎಳ್ಳು-ಬೆಲ್ಲ ಹಂಚುವಾಗ ಒಬ್ಬರಿಗೊಬ್ಬರು, "ಎಳ್ಳು-ಬೆಲ್ಲ ಕೊಟ್ಟು ಒಳ್ಳೊಳ್ಳೆ ಮಾತಾಡಸ" ಎಂದೆನ್ನುತ್ತಾರೆ. ಇದು ಮಾತುಗಳನ್ನು ಮಧುರಗೊಳಿಸುತ್ತ ಸಂಬಂಧಗಳನ್ನು ಸುಮಧುರಗೊಳಿಸುತ್ತದೆ. "ಮಾತು ಬಲ್ಲವ ಮಾಣಿಕ ತಂದ ಮಾತರಿಯದವ ಜಗಳ ತಂದ" ಅಲ್ಲವೆ ?

ಇದರಲ್ಲಿ ಹೋಳಿ ಹಬ್ಬದ ಪಾತ್ರವೂ ಹಿರಿದಾದದ್ದು. ಇಲ್ಲಿ ಹೆಚ್ಚಾಗಿ ಎಲ್ಲರೂ, ಅದರಲ್ಲೂ ತರುಣರು, ಇಡೀ ವರ್ಷದಲ್ಲಿ ಹದಿನೈದು ದಿನ ಎಂಟು ದಿನ ಇಲ್ಲವೇ ಒಂದೇ ದಿನವಾದರೂ ಸ್ವೇಚ್ಛೆಯಿಂದ ಕುಣಿದಾಡುತ್ತಾರೆ. ಇಡೀ ವರ್ಷ ಅದುಮಿ ಹಿಡಿದ ಶಕ್ತಿ, ಲೈಂಗಿಕ ಬಯಕೆಗಳನ್ನು ಹಾಡಿನಂತೆ ಕುಣಿದು, ಮಣಿದು, ಹೊಯ್ಕೊಂಡು ದಣಿದು ಹೋಳ್ಗಿ ತುಪ್ಪ ಉಣಿದು

ತೆಪ್ಪಗೆ ಮಲಗುತ್ತಾರೆ. ಈ ಮುಖಂಡರ ಅದುಮಿ ಹಿಡಿಯುವುದರಿಂದ ಸಂಭವಿಸಬಹುದಾದ ಸಮಸ್ಯೆಗಳಿಂದ ಪರಿಹಾರ ಪಡೆದು ನಿಚ್ಚಳ ನಿರುಂಬಳ ಮನಸ್ಕರಾಗುತ್ತಾರೆ. ಇದು ಹಿರಿಯರ ಮಾರ್ಗದರ್ಶನದಲ್ಲಿ ನಡೆಯಬೇಕು. ಹೀಗಾದರೆ ಮತ್ತೆ ಹೋಳೀ ಹಬ್ಬ ಬರುವವರೆಗೆ ಎಲ್ಲರೂ ಆ ವಿಷಯ ಮರೆಯಬಲ್ಲರು. ಇಲ್ಲವಾದರೆ ಅದುಮಿದ ಆಸೆ ಲೈಂಗಿಕ ಅಪರಾಧಕ್ಕೆಳಸಬಹುದು ಇಲ್ಲವೆ ಬೇರೆ ಸಮಸ್ಯೆಗಳೂ ತಲೆದೋರುವ ಸಾಧ್ಯತೆ ಇದೆ. ಅದಕ್ಕೆಂದೆ ಹಾಡಿದ್ದಾರೆ.

ಹೋಳಿ ಮಾಡದ ನಾಡು ನಾಳಿನದೆ ಕಾಡಾತೊ
ಗೋಳಾತೊ ಜನಕ ಮೂಲಾತೊ । ಮಾಳೆ ಹೋಗಿ
ಹಾಳಾತೊ ಪಿಡುಗದ್ದು ದಿನದಿನಕೊ

ಇಲ್ಲಿ ಬರುವ ಹಾಡುಗಳು ಅಶ್ಲೀಲ ಆದರೂ ಅವು ಮನಸ್ಸಿನಲ್ಲಿರುವ ಭಾವನೆಗಳನ್ನು ತೊಡೆದು ಹಾಕಬಲ್ಲವು. ಇಲ್ಲಿ ಕೂಡ ಗಣಪತಿಯನ್ನು ನೆನೆಯುತ್ತಾರೆ. ಹೋಳೀ ಹಬ್ಬವು ನಿರ್ವಿಘ್ನವಾಗಿ ಜರುಗಬೇಕೆಂಬುದೊಂದು ಸದಿಚ್ಛೆ.

ಗುಂಡುಮಾರಿ ಹೆಣ್ಣು ಚೆಂದ
ಗುಲಗಂಜಿ ಬಣ್ಣ ಚೆಂದ
ಗ್ವಾಡಿಗಿ ಬಡಿದ ಸುಣ್ಣ ಚಂದ
ಹುಡಗಗ ಮೀಸಿ ಚಂದ
ಹುಡುಗೀಗೆ ಮಲಿ ಚಂದ
ಹೋರಿಗಿ ಇಣಿ ಚಂದ
ಬಾರೋ ಗಜಾನನ ನಿನ್ನ
[illegible]ವಸೇವಕನಾ

೧೧. ದೇಶವೇ ದೇವರು

ಜನಪದವು ರಾಷ್ಟ್ರಧರ್ಮ. ದೇಶಭಕ್ತಿಗಳನ್ನು ಬೋಧಿಸುವಲ್ಲಿ, ಪಾಲಿಸುವಲ್ಲಿ ಹಿಂದೇಟು ಹಾಕಿಲ್ಲ. ನಮ್ಮ ದೇಶದ ಬಗೆಬಗೆಯ ಧರ್ಮಗಳಲ್ಲಿ ಸಾವಿರಾರು ದೇವರುಗಳನ್ನು ಪೂಜಿಸಿದರೂ, ಮನೆಬಿಟ್ಟು ಹೊರಗೆ ಬಂದಾಗ ಅದೇಕೆ ಮನೆಯಲ್ಲಿದ್ದಾಗಲೂ ನಮ್ಮ ದೇಶಕ್ಕಿಂತ ಹೆಚ್ಚಿನ ದೇವರಿಲ್ಲ ಎನ್ನುತ್ತಾರೆ. ಇದು ಯಾವ ದೇಶಕ್ಕೂ, ಸಮಾಜಕ್ಕೂ ಸಮಂಜಸ. ಇದನ್ನೇ ಆಧರಿಸಿ ಒಂದು ರಾಷ್ಟ್ರಧರ್ಮವನ್ನು (National Religion) ಸಿದ್ಧಪಡಿಸಿ ಅದನ್ನು ಪಾಲಿಸಲು ಮಕ್ಕಳಿಗೆ, ತರುಣರಿಗೆ ಎಲ್ಲ ಪ್ರಜೆಗಳಿಗೂ ತರಬೇತು ಕೊಡಬೇಕು. ಅಂದರೇನೆ ರಾಷ್ಟ್ರದ ಇಲ್ಲವೇ ಸಮಾಜದ ಪ್ರಗತಿ ಸಾಧ್ಯ. ರಾಷ್ಟ್ರಧರ್ಮದ ಮುಂದೆ ಸಮಷ್ಟಿ ಒಪ್ಪುವ ಉಳಿದಾವ ಧರ್ಮವೂ ಗೌಣ. ಹಾಡು ಕೇಳಿ :

ನಮ್ಮ ದೇಶಕಿಂತ ಹೆಚ್ಚಿನ ದೇವರಿಲ್ಲರಣ್ಣಾ
ನಮ್ಮ ದೇಶದ ಮಾನ ಕಾಯಿರಣ್ಣಾ
ಲಂಚವ ಸುಲಿವ್ರೋನು, ಸೂಳೆಯ ಬಿಡದೋನು
ಹೆಂಡವ ಕುಡಿವ್ರೋನು ಅರಸಲ್ಲ ಭಂಡ
ನಾಡಿಗೆ ಕೇಡನೆ ತರುವ್ರೋನು

೧೨. ಪ್ರಜಾಪ್ರಭುತ್ವದ ಸುಳುಹು

ಜನಪದದಲ್ಲಿ ಪ್ರಜಾರಾಜ್ಯದ ಸುಳುಹೂ ಸುಳಿದೆಗೆದು ಬೆಳೆದಿದೆ. ರಾಜಕೀಯ ವಿಜ್ಞಾನವೂ ಇಲ್ಲಿ ಪ್ರಕಟವಾಗಿ ಒಡ

ಮಾಡಿದಂತಿದೆ. ಪ್ರಜಾರಾಜ್ಯದ ತಿರುಳು-ಹುರುಳುಗಳನ್ನೂ ಲಾವಣಿಗಳಲ್ಲಿ ಬಿಂಬಿಸಿದ್ದಾರೆ ಅಂದು ಕೆಲ ಮಾಂಡಲೀಕ ಅರಸರೂ ರಾಜಾಧಿರಾಜರೂ ಹಾಗೂ ರಾಣಿಯರೂ ಸ್ವಾತಂತ್ರ್ಯಕ್ಕಾಗಿ ಪರಕೀಯರ ವಿರುದ್ಧ ಹೋರಾಡಿದ್ದಾರೆ. ಇಲ್ಲಿ ಅಪರೋಕ್ಷವಾಗಿ ಪ್ರಜಾರಾಜ್ಯದ ಕೆಲ ತಂತ್ರಗಳನ್ನು ಅಳವಡಿಸಿಕೊಂಡಿದ್ದರೆಂಬುದು ಒಡೆದು ಕಾಣುತ್ತದೆ. ಅಲ್ಲದೆ ಪ್ರಜರ ಕಲ್ಯಾಣ ಕಾರ್ಯಗಳನ್ನೂ ಪಮ್ಮಿಕೊಂಡು ತಮ್ಮ ತಮ್ಮ ರಾಜ್ಯಗಳನ್ನು ಸುಖ-ಸಮೃದ್ಧಿಗಳ ತಾಣಗಳನ್ನಾಗಿ ಮಾಡಲು ಹೆಣಗಿದ್ದಾರೆ ಎಂಬುದು ಅನೇಕ ಲಾವಣಿಗಳಲ್ಲಿ ಕಂಡುಬರುತ್ತದೆ. ಆದರೆ ನಮ್ಮವರೇ ನಮ್ಮವರನ್ನು ಮೋಸಮಾಡಿದ್ದಾರೆ, ಮೋಸಮಾಡುತ್ತಿದ್ದಾರೆ ಎಂಬುದು ನಿಚ್ಚಳವಾದ ಮಾತು. ಈಗಿನ ಪ್ರಜಾರಾಜ್ಯದ ವ್ಯವಸ್ಥೆಯಲ್ಲಿ ಕಂಡುಬರುವ ಕೊಳಕು-ಹುಳುಕುಗಳನ್ನು ಹೊರಗೆ ಹಾಕಲು ಮಾರ್ಗದರ್ಶಕ ಸಾಹಿತ್ಯವೂ ಇದಾಗಬಲ್ಲುದಾಗಿದೆ.

ಬಂಗಾರ ಹೊಗಿ ಹಾಯುವಂಥ ಸಿಂಗಾರನಾಡು ನರಗುಂದ
ಹ್ಯಾಂಗಾರೆ ಮಾಡಿ ನುಂಗೊಂಡು ಇಂಗ್ರೇಜರಾ
ಗಂಡುಗಲಿ ಬಾಬಾಸಾಯ್ಬ ಭಂಡಮಾಡಿ ಬಿಟ್ಟಾನ
ರುಂಡಮಾಲಧಾರಿ ಶಿವನ ಅವತಾರಾ ॥ ಪಲ್ಲವಿ ॥

ಕರ್ನಾಟಕ ಪ್ರಾಂತದೊಳಗ ಸಿರಿನಾಡು ನರಗುಂದ
ಕುಡಕಬ್ಬಿಣ ಆಗಿತ್ತೊ ಬಂಗಾರ
ಧಾನ್ಯ, ಧನಗಳಿಂದ ಸಮುರುದ್ಧಿ ಸಂಪೂರ್ಣ
ಚಿಂತಿ ಅಂಬೊದು ಕನಸಿನ್ಯಾಗ ಇಲ್ಲ ಜೋರಾ
ಧರಮರಾಜನಂಥಾ ಭೂಪ ದರಪ ಅಂಬೂದಿಲ್ಲ ಗೊತ್ತ
ಪ್ರಜ ಅಂದರ ಮಕ್ಕಳಂತೆ ತಿಳಿಯುವರಾ
ಪ್ರಜರ ಜೋಡಿ ಪ್ರಜ ಆಗಿ ಪ್ರಜರ ಆಳು ತಾನಾಗಿ
ರಾಜ್ಯವಾಳುತಿದ್ದ ಬಾಬಾ ಸಾಯ್ಬ ಧೀರಾ

ಕರನಾಟದೇಶಂಗು ಕಿರೀಟವಾದ ನರಗುಂದ
ವಜ್ರವಾದ ಕೋಟೆ ಬಲುಬಂಧುರಾ
ನರಗುಂದದ ರಾಜ್ಯಲಕ್ಷ್ಮಿ ಹರುಷದಿಂದ ನಲಿಯುತಿದ್ಲು
ವಿಜಯದ ಧನಲಕ್ಷ್ಮಿ ಸಿಂಗಾರಾ
ಭಾಗ್ಯಕೊಟ್ಟ ವೆಂಕಟಪತಿ ಯಾವುದಕ್ಕಲ್ಲ ಕೊರತಿ
ಧನ್ಯದರ್ಬಾರಾ-ಸತ್ಯದಲ್ಲಿ ನ್ಯಾಯನಿಷ್ಠುರಾ
ರತ್ನಜ್ಯೋತಿ ಇದ್ದಳೊ ಪಾರ್ವತಿ-ಬಾಬಾಸಾಯ್ಬನ ಸತಿ
ನೀತಿಗಾಧಾರಾ-ಕೆರಳಿದರ ಕಾಳಿಯವತಾರಾ
ರಾಜ ಮಾತನೊಡಗೊಂಡ ರಾಜಾರಾಣಿಕೂಡಿಕೊಂಡ
ಧರ್ಮದಿಂದ ರಾಜ್ಯವ ನಡಸುವರಾ-ಇತ್ಯಾದಿ
ಮುಂದೆ ಕೇಳಿ ಶಿವಪ್ಪನಾಯಕನ ರಾಜ್ಯಾಡಳಿತ :
ಭಲೆ, ಭಲೆ, ಶಿವಪ್ಪನಾಯಕ ಭಲೆ, ಭಲೆ, ಶಿವಪ್ಪನಾಯಕ
ವ್ಯವಸಾಯ ಶಿಸ್ತು, ಕಂದಾಯ ಶಿಸ್ತು ಆಡಳಿತ ಅಚ್ಚುಕಟ್ಟು
ಬಲದಲ್ಲಿ ಶಿಸ್ತು, ಛಲದಲ್ಲಿ ಶಿಸ್ತು ನಾಡೆಲ್ಲ ಶಿಸ್ತು ತುಂಬಿತ್ತು
ಭೂಗುಣವ ತಿಳಿದ. ವಿಂಗಡಿಸಿ ಪೇಳ್ದ ತೆರಿಗೆಯ ಮಾನಕಂಡ
ಗೋಪಾದದನಿತು ಪಡಬೀಳದಂತೆ ನೆಲವೆಲ್ಲ ಹೊಲವ ಮಾಡಿಸಿದ
ಸಹಕಾರ ಜೀವನ ಸರಕಾರದಲ್ಲಿ ಸಾಕಾರಗೊಂಡು ನಿಂತು
ಉಪಕಾರವಲ್ಲಿ ತಾ ನೆಲಸಿನಿಂದು ಸುಖಸಾರ ಜೀವನಾಯ್ತು
ಆದಾಯದಲ್ಲು, ಕಂದಾಯದಲ್ಲು, ಅನ್ಯಾಯಕಿಲ್ಲ ಸ್ಥಳವು
ನಾಡಿಗು ಸೊಬಗು ರಾಯಗು ಸೊಬಗು ಜನಕೆಲ್ಲ ಸಿರಿಯು ಸೊಗವು

ಕೆಳದಿ ಚೆನ್ನಮ್ಮ ಹಾಗೂ ಅವಳ ದತ್ತು ಪುತ್ರ ಬಸವಪ್ಪ ನಾಯಕರೂ ಅನಾಥ ರಕ್ಷಕರಾಗಿದ್ದರು. ಚೆನ್ನಮ್ಮಾಜಿಯು ಪೂರ್ಣಿಮಾ ತಿಥಿಯ ದಿನ ಶಿಶುಗಳಿಗೆ ಹಾಲು, ಬೆಣ್ಣೆ ಕೊಡುತ್ತಿದ್ದರು. ಇಲ್ಲಿ ಮಕ್ಕಳ ಆರೋಗ್ಯ, ಕಲ್ಯಾಣ ಕಾರ್ಯಕ್ಕೆ ಆಗಿನವರೂ ಮಹತ್ವದ ಸ್ಥಾನ ಕೊಟ್ಟಿದ್ದಾರೆಂಬುದು ತಿಳಿಯುತ್ತದೆ. ಇಂದಿನ ಮಕ್ಕಳೇ ನಾಳಿನ ನಾಗರಿಕರಲ್ಲವೆ? ಹಾಡು ಕೇಳಿ :

ಧೀರೆ, ಗಂಭೀರೆ, ಗುಣಸಂಪನ್ನೆ
ಅಹುದಮ್ಮ, ಚೆನ್ನಮ್ಮ ಕೆಳದಿರಾಣಿ

ಇಸ್ಲಾಂ ಕ್ರಿಶ್ಚನ್ ಮರಾಠರೆನ್ನದೆ
ಸರ್ವರಿಗಾಶ್ರಯ ನೀ ಕೊಟ್ಟೆ
ಧರ್ಮ ಸಮನ್ವಯ ದೃಷ್ಟಿಯನಿಟ್ಟೆ
ಉನ್ನತ ಶುಭಗುಣ ರಾಣಿಯು ನೀನೆ

ಆಡಳಿತ ಆಳಿಕೆಯು ಏನಂತೆ
ರಾಜ ನೀತಿಯ ನಿಪುಣೆ ನೀನಲ್ತೆ
ಕ್ಷಾತ್ರದಲಿ, ದಾನದಲಿ ಯಾರಿಲ್ಲ ಸರಿದೊರೆ
ಧವಳ ಕೀರುತಿ ಅಮ್ಮಾ ನಿನಗೆ ಸಲ್ಲುತಿದೆ

ಶೃಂಗೇರಿ ಮಠವ ಸಿಂಗರಿಸಿದೆ
ಲಕ್ಷಜನಕು ವೀರಿ ಉಣಬಡಿಸಿದೆ
ಬಂಗಾರ ಬಾಳನ್ನು ಬಾಳಿ ಉಳಿದೆ
ನಿನ್ನಂಥವರೀಗ ಬೇಕಾಗಿದೆ ಇತ್ಯಾದಿ

ಅನಾಥ ರಕ್ಷಕ ಬಸಪ್ಪ ನಾಯಕ
ಕೆಳದಿರಾಣಿ ಚೆನ್ನಮ್ಮನ ದತ್ತುಪುತ್ರನೀತ
ಮಾತೆಯ ಉಪದೇಶವನ್ನು
ಬಿಡದೆ ತಲೆಯಮೇಲೆ ಹೊತ್ತು

ಮಮತೆಯಿಂದ ಪ್ರಜರ
ಸಲುಹಿದಂತ ರಾಜ್ಯರಕ್ಷಕ
ನುಡಿಯ ಸೇವೆ ನಾಡಸೇವೆ
ಮಾಡಿದ ದೊರೆ ಈತ
ದಾನಿ, ಮಾನಿ, ಪ್ರೇಮಿ ಮತ್ತೆ ದೀನಜನರ ಪಾಲಕ
ಚಿನ್ನಮ್ಮನ ಪುಣ್ಯತಿಥಿಗೆ ಅಶನ ವಸನ ಅನಾಥರಿಗೆ
ದೇವ ಭಕ್ತಗನ್ನದಾನ ಹಾಲು ಬೆಣ್ಣೆ ಶಿಶುವಿಗೆ.... ಇತ್ಯಾದಿ

೧೩. ಸಮಾಜ ಧೋರಣೆಗೆ ಬುನಾದಿ (Social Policy)

ಯಾವುದೊಂದು ದೇಶವು ಪ್ರಗತಿ ಹೊಂದಬೇಕಾದರೆ ಅದಕ್ಕೆ ಬರಿಯ ಆರ್ಥಿಕ ಧೋರಣೆ ಇದ್ದರಷ್ಟೆ ಸಾಕಾಗದು; ಸಮಾಜ ಧೋರಣೆಯ ಅವಶ್ಯಕತೆಯೂ ಇದೆ. ಸಮಾಜ ಧೋರಣೆಯಲ್ಲಿ ಆರ್ಥಿಕ ಧೋರಣೆ ನೈತಿಕ ಧೋರಣೆಗಳು ಅವಳಿ-ಜವಳಿ ಮಕ್ಕಳಂತೆ ಬೆಳೆಯಬೇಕಾಗುತ್ತದೆ. ಸರಿಯಾದ ಸಮಾಜ ಧೋರಣೆ ಇರದೆ ಬರಿ ಆರ್ಥಿಕ ಧೋರಣೆಯನ್ವಯ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೂ ಇಂದು ವಿಭಿನ್ನವಾದ ಬಿಕ್ಕಟ್ಟನ್ನು ಅನುಭವಿಸುತ್ತಿವೆ. ಯಂತ್ರ-ತಂತ್ರಜ್ಞಾನ, ಉದ್ದಿಮೆ, ಉದ್ಯೋಗಗಳು ಸಾಕಷ್ಟಿದ್ದು ಆರ್ಥಿಕ ಅಭಿವೃದ್ಧಿ ಸಾಧಿಸಿದಾಗ್ಯೂ ಮಾನವನಲ್ಲಿ ನೀತಿ-ನಡತೆ, ಸಾಮಾಜಿಕ ಸಂಬಂಧ, ಗುಣ, ಶ್ರಮಗೌರವ, ವೃತ್ತಿಮೌಲ್ಯಗಳು ಸರಿ ಇರದಿದ್ದರೆ ಇದರಿಂದ ಹೆಚ್ಚಿನ ಹಾನಿ ಆಗುವಲ್ಲಿ ಸಂದೇಹವಿಲ್ಲವೆಂಬುದನ್ನು ಎಲ್ಲರೂ ಬಲ್ಲರು

ಇದಕ್ಕೆಲ್ಲ ಹನ್ನೆರಡನೆಯ ಶತಮಾನದ ಬಸವಣ್ಣನವರು ಕಟ್ಟಿ ಬಯಸಿದ,ಕಟ್ಟಿದ ಸಮಾಜದ ಆಧಾರದಿಂದ ನಾವು ನಮ್ಮ ಸಮಾಜ ಧೋರಣೆಯನ್ನು ರೂಪಿಸಿಕೊಳ್ಳಲು ಯಾವ ಅಭ್ಯಂತರವೂ ಇಲ್ಲ ಎನ್ನಬಹುದು. ಅವರ ಅನುಭವ ಮಂಟಪವೇ ವಿಜ್ಞಾನ ಸುಜ್ಞಾನಗಳಿಂದ ಸಂಘಟಿಸಿದ ಒಂದು ಸುಸಜ್ಜಿತ ನಿಯಮಬದ್ಧ ಕಮ್ಮಟ (workshop). ಬಸವಣ್ಣನವರು ಕಲ್ಲು ಪೂಜೆಯನ್ನು ಧಿಃಕ್ಕರಿಸಿ ಧರ್ಮದಲ್ಲಿ ಸರಳತೆ ವೈಜ್ಞಾನಿಕತೆಗಳನ್ನು ಅಳವಡಿಸಿದರು. ಅಂದರೆ ವಿಜ್ಞಾನವನ್ನು ಸ್ವೀಕರಿಸಿದರು.ಸುಜ್ಞಾನವನ್ನೂ ಸರಿದೊರೆಯಾಗಿ ಬೆಳೆಸಲು ಹೋರಾಡಿದರು. ನೀತಿಗೆ ನಡೆ-ನುಡಿಗಳಿಗೆ ಮಹತ್ವ ಕೊಟ್ಟು ಅದರಂತೆ ನಡೆದರು. ಅನೇಕರು ಇದನ್ನು ಪಾಲಿಸಿದರು. ಉದ್ಯೋಗದಲ್ಲಿ ಯಾವುದೂ ಮೇಲಲ್ಲ,ಯಾವದೂ ಕೀಳಲ್ಲ. ವೃತ್ತಿ ಶ್ರಮ ಗೌರವಗಳಿಂದ ನೀತಿ ನಡೆವಳಿಕೆಗಳಿಂದ ಕೀಳು ಕುಲದಲ್ಲಿ ಜನಿಸಿದವನೂ ಮೇಲಾಗಬಲ್ಲ,ಶರಣಸ್ಥಾನ ಮುಟ್ಟಬಲ್ಲ, ಹುಟ್ಟಿನಿಂದ ಯಾವನೂ ಮೇಲಲ್ಲ, ಯಾವನೂ ಕೀಳಲ್ಲ ಎಂಬುದು ಅವರ ಸಮಾಜ ರಚನೆಗೆ ಬುನಾದಿ. "ಶರಣಸ್ಥಾನ" ಇದನ್ನು. ಸಾಮಾಜಿಕವಾಗಿ ಅರ್ಥೈಸಬೇಕಾದರೆ ಮಾನವನ ನೈತಿಕ ಆರ್ಥಿಕ ಸಾಮಾಜಿಕ ಈ ಮೂರು ಘಟ್ಟಗಳಲ್ಲೂ ಉನ್ನತವಾದ ಸ್ಥಾನ (Material, moral & social status). ಚಮ್ಮಾರಿಕೆ. ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಗಾಣಿಗತನ, ಕೃಷಿ, ಉದ್ದಿಮೆ ಯಾವುದರಲ್ಲೂ ವಿಜ್ಞಾನವನ್ನು ಅಳವಡಿಸಿ ವೃತ್ತಿಮೌಲ್ಯಗಳನ್ನು ಕಾಪಾಡಿಕೊಂಡು ದುಡಿದರೆ ಆರ್ಥಿಕ ಅಭಿವೃದ್ಧಿ ಸಾಧ್ಯ. ಆದಾಗ್ಯೂ ನೈತಿಕ ಬೆಳವಣಿಗೆಯೂ ಆಗಬೇಕಾಗುವದು. ಇವೆರಡರಿಂದ ಮನುಷ್ಯನಿಗೆ ಸಮಾಜದಲ್ಲಿ ಸ್ಥಾನ ದೊರೆಯಬಲ್ಲುದು, ಬರಿ ಜಾತಿಯಿಂದಲ್ಲ. ಜಾತಿ ತಪ್ಪಿದರೂ ನೀತಿ ತಪ್ಪಬಾರದೆಂಬ ಒಂದು

ಗಾದೆಮಾತು ಇದೆ. ನೀತಿ ಬಿಟ್ಟು ನಿರುದ್ಯೋಗಿಯಾಗಿದ್ದರೆ ಕೀಳು, ಉದ್ಯೋಗಿಯಾಗಿ ಉನ್ನತ ಹುದ್ದೆಯಲ್ಲಿದ್ದು ನೀತಿ ಬಿಟ್ಟು ಭ್ರಷ್ಟಾಚಾರಿಯಾದರೆ ಕೀಳು. ನೀತಿ ಒಂದನ್ನೇ ಹಿಡಿದು ನಿರುದ್ಯೋಗಿಯಾಗಿ ಅಂಡಲೆಯುವದು ಕೀಳು. ನೀತಿ ಉದ್ಯೋಗನಿಷ್ಠೆಗಳೆರಡೂ ಅವಶ್ಯ.

ಆಡಿ ಉಂಡವ ಕೆಟ್ಟ ಕೇಡ ನೆನೆದವ ಕೆಟ್ಟ
ನೋಡದೆ ಕೆಟ್ಟ ಬೆಳಭೂಮಿ . . . . ಇತ್ಯಾದಿ

ಆದರೆ ಈಗ ನಮ್ಮ ದೇಶದಲ್ಲಿ ಜಾತಿಯ ಹೆಗ್ಗಣಗಳನ್ನು ಮನದ ಹೊದರೊಳಗಿರಿಸಿ ವೃತ್ತಿಗೌರವ, ವೃತ್ತಿ, ಮೌಲ್ಯ, ನೀತಿ, ನಡತೆಗಳ ಅರ್ಥವನ್ನು ಒಂದೊಂದಾಗಿ ಕಳೆದುಕೊಳ್ಳಹತ್ತಿ ಅತೀವವಾಗಿ ನರಳ ಬೇಕಾಗಿದೆ.

ವೈಜ್ಞಾನಿಕತೆಯನ್ನು ಒಪ್ಪಿದ ಬಸವಣ್ಣ ನೀತಿ-ನಡತೆಗಳಲ್ಲದೆ ಕಾಯಕವು ಕೈಲಾಸವೆಂದು ಅವುಗಳನ್ನು ಪಾಲಿಸಿ ಗೆದ್ದ. ಅದು ಅಂದು ಅರ್ಥವಾಗಿರದಿದ್ದರೂ, ಇಂದಿನ ಆಧುನಿಕ ಸಮಾಜದಲ್ಲಿ ಈ ನೀತಿ ಅಂದರೆ ಧೋರಣೆಯನ್ನು ತೊಡಿಸಬೇಕಾಗಿದೆ. ಇದಕ್ಕೆ ಶರಣರ ಮೇಲಿನ ಕೆಲ ಜನಪದಗೀತೆಗಳನ್ನು ಮಾದರಿಯಾಗಿ ಕೊಡಬಹುದು.

ಹೊಲೆಯ ಮಾದಿಗರೆಂಬ ಬಲೆಯಾವ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ। ನಿನ್ನ ಸುರು
ನೆಲೆಯಾತು ನಿತ್ಯ ಜನಪದಕೆ ॥

ಕಿರಿ ಕುಲದ ಹರಳಯ್ಯ ವರಶರಣ ತಾನಾದ
ಪರಮತವ ಜಯಿಸಿ ಹರಸಿದನು । ಹರಳನಿಗೆ
ಹರಮೆಚ್ಚಿ ಮೆರಸಿ ಕರೆದೊಯ್ದ॥

ಜಾತಿಯೊಳು ಮಾದರನು ನೀತಿಯೊಳು ಶಿವಶರಣ
ಮಾತು ವಚನಗಳು ಚೆನ್ನಯ್ಯ । ಶಿವನುಂಡು
ಕೂತು ಎದೆಯೊಳಗೆ ಅಂಬಲಿಯು॥

ಶಿವರೂಪ ಕಾಯಕವ ಶಿವಶರಣ ಚೌಡಯ್ಯ
ಭವದೊಳಗೆ ಮಾಡಿ ಹೆಸರಾದ। ಶರಣನಿಗೆ
ಶಿವಮೆಚ್ಚಿ ಕೊಟ್ಟ ಶಿವಪದವ॥

ನಿತ್ಯದಲ್ಲಿ ಕೇತಯ್ಯ ಕೆತ್ತುವನು ಬಿದಿರೆಳೆಯು
ಚಿತ್ತರದ ಬುಟ್ಟಿ ಮೊರ ಹೆಣೆದು। ಮಾರುವನು
ಉತ್ತಮರ ನಾಡು ಬೆಳುವಲಕೆ।

ಶಿವಶರಣ ಕಾಯಕವ ವರೆಗೆ ಹಚ್ಚುವರಾರು
ಹರಸಹಿತ ಸೋತು ಬದುಕಿಸಿದ। ಮೇದಾರ
ಕೇತ ನಿನಗೆ ಸರಿಯಾರು॥

ಮಡಿವಾಳ ಮಾಚಯ್ಯ ದುಡಪುಳ್ಳ ಶಿವಭಕ್ತ
ಕಾಯಕವ ಪಾಲಿಸಿದ ನಾಯಕನು ವೀರನವ
ಮಾಯೆಗೊರೆಗಲ್ಲು ಮಾಚಯ್ಯ। ನಿತ್ಯದಲಿ
ಜೀಯು ವಾಸನೆಗೆ ಶಿವಶರಣ॥

ಕಾಯಕವೆ ಕತ್ರ್ಯಾಗಿ ನ್ಯಾಯ ಮಾಡುತ ಹೊರಟ
ರಾಯ ರಾಯರಲಿ ನಡುಗಿದರು। ಮಾಚನಿಗೆ
ನ್ಯಾಯ ಸಹ ನಡುಗಿ ಸಭೆಯೊಳಗೆ॥

ಕುಂಬಾರ ಗುಂಡಯ್ಯ ತುಂಬಿ ತಿಗರಿಗೆ ಕೆಸರ
ಶಂಭುಹರನೆಂದು ತಿರುಗಿಸಲು। ಶಿವಕುಣಿದ
ಹಂಬಲಿಸಿ ಜಂಗ ಕಟಿಗೊಂಡು॥

ಹಣವಂತ ಬೊಮ್ಮಯ್ಯ ಗುಣವಂತ ಶರಣಯ್ಯ
ಹಣವಂತ ವೀರ ಶಿವಮತಕೆ। ನಾಡೊಳಗೆ
ತನುವಂತನಾದ ಪಶುಗಳಿಗೆ॥

ನೇಗಿಯುದೆ ಕಾಯಕವ ಚಾಗಿ ಅಮುಗನು ಮಾಡಿ
ಯೋಗ ಹೊಂದಿದನು ಹೂಳಜೆಯ। ಜನ ಭಜಿಸಿ
ತೂಗಿ ದಾಸೋಹ ತೇರೆಳೆದು॥

ಇಳಿಹಾಳ ಬೊಮ್ಮಯ್ಯ ಹೊಲಗೆಲಸ ಕಾಯಕವ
ನಲುಮೆಯಲಿ ಮಾಡಿ ದಾಸೋಹ। ಹರಸೇವೆ
ಸಲಿಸಿ ಲಿಂಗದೊಳು ಬಯಲಾದ॥

ಹೀಗೆ ವ್ಯಾಪಾರುದ್ಯೋಗಗಳಲ್ಲೂ ಶರಣತ್ವ ಸಾಧಿಸಿದವರು ಅನೇಕ. ಆಗ ಅವರು ನೀತಿ–ಬಿಟ್ಟಿರಲಿಲ್ಲ. ಈಗ ವ್ಯಾಪಾರ, ರಾಜಕೀಯ, ಶಿಕ್ಷಣ,ಉದ್ದಿಮೆ, ಆಡಳಿತ ಇತ್ಯಾದಿ ರಂಗಗಳಲ್ಲಿ ನೀತಿಯನ್ನು ಪಾಲಿಸದಿದ್ದುದಕ್ಕೆ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಅಷ್ಟೇ ಏಕೆ ಹೊಸ, ಹೊಸ ಅಪರಾಧಗಳು ಜನ್ಮತಳೆದು ಉಲ್ಬಣಗೊಳ್ಳಹತ್ತಿವೆ. ಅಂದರೆ ಬಿಳಿಯುಡುಪಿನ ಅಪರಾಧ. ಸ್ಥಿತಿವಂತರು ಎಸಗುವ ಅಪರಾಧ (White-Collar Crime), ಆಡಳಿತ ಅಪರಾಧ (Administrative Crime). ಶೈಕ್ಷಣಿಕ–ಅಪರಾಧ (Educational Crime) ಇತ್ಯಾದಿ. ಈಗಿನ ಯುಗಕ್ಕೆ ತಕ್ಕಂತೆ–ಹೊಸ, ಹೊಸ ಉದ್ಯೋಗ, ವ್ಯಾಪಾರಗಳನ್ನು ಮಾಡಿದರೂ ನೀತಿ–ನಿಯಮತ್ತುಗಳನ್ನು ಬಿಡಬಾರದಲ್ಲವೆ? ಕಾರಣ ಬಸವಣ್ಣನವರ ಹಾಗೂ ಅವರ ಶರಣ ಮಂಡಳಿಯ ಅನುಭವ ವಾಣಿಗಳು ಇಂದಿನ ಸಮಾಜ ಧೋರಣೆಗೆ ತಾರಕವಾಗಬಲ್ಲವು.

ಉಪನ್ಯಾಸ ಮಾಲೆಯ

ಕೆಲವು ಉಪಯುಕ್ತ ಪ್ರಕಟನೆಗಳು

೧. ಜನಪದ ಸಾಹಿತ್ಯದಲ್ಲಿ ಮಾತೃ ವಾತ್ಸಲ್ಯ
—ಲೀಲಾವತಿ ಬಿ. ತೋರಣಗಟ್ಟಿ

೨. ಜನಪದದಲ್ಲಿ ಮಕ್ಕಳ ಸಾಹಿತ್ಯ
—ಸಂಗಮೇಶ ಎಂ. ಬಿರಾದಾರ

೩. ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಚಲಕ
—ಶಿಂಪಿ ಲಿಂಗಣ್ಣ

೪. ಜನಪದ ಸಾಹಿತ್ಯದಲ್ಲಿ ನೀತಿ —ಎಂ. ಎನ್. ವಾಲಿ

೫. ಜನಪದ ಸಾಹಿತ್ಯದಲ್ಲಿ ಹಾಸ್ಯ —ಮೃತ್ಯುಂಜಯ ಹೊರಕೇರಿ

೬. ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ
—ಬಸವರಾಜ ಮಲಶೆಟ್ಟಿ

೭. ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ
—ಎಂ. ಬಿ. ಹೂಗಾರ

೮. ಜನಪದ ಕಾವ್ಯದಲ್ಲಿ ಪ್ರಣಯ ಚಿತ್ರಣ
—ಬಸವರಾಜ ಸಬರದ

೯. ಹಂತಿಯ ಪದಗಳ ಸೊಗಸು —ಎಸ್. ಆರ್. ಗೌಡರ

೧೦. ಹಾಲಕ್ಕಿ ಒಕ್ಕಲಿಗರ ಜನಪದ ಗೀತಗಳು
—ಎನ್. ಆರ್. ನಾಯಕ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ